ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	607
2	ಸದಸ್ಯರ ಹೆಸರು	:	ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	11-12-2025
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಇರುವ ಅಂದಾಜು ಬಿ ಖಾತಾಗಳ ಸಂಖ್ಯೆ ಮತ್ತು ಎ ಖಾತಾಗಳ ಸಂಖ್ಯೆ ಎಷ್ಟು;	• ಅಂದಾಜು 'ಬಿ' ವಹಿ ಸಂಖ್ಯೆ: 8,24,218 ಸ್ವತ್ತುಗಳು. • ಅಂದಾಜು 'ಎ' ವಹಿ ಸಂಖ್ಯೆ: 13,95,191 ಸ್ವತ್ತುಗಳು.
ಆ)	ಜಿಬಿಎ ವತಿಯಿಂದ ಬಿ ಖಾತಾ ಸ್ವತ್ತುಗಳನ್ನು ಎ ಖಾತಾಗೆ ಪರಿವರ್ತನೆ ಮಾಡಿಕೊಳ್ಳಲು ಯಾವ ದಿನಾಂಕದಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ; ಇಲ್ಲಿಯವರೆಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಪರಿವರ್ತನೆ ಮಾಡಿದ ಖಾತೆಗಳ ಸಂಖ್ಯೆ ಎಷ್ಟು;	• ದಿನಾಂಕ: 15-10-2025 ರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. • ದಿನಾಂಕ: 01-12-2025ರ ವರೆಗೆ ಒಟ್ಟು 2,819 ಅರ್ಜಿಗಳು ಸ್ವೀಕರಿಸಲಾಗಿದೆ. • ಅರ್ಜಿಗಳು ಪರಿಶೀಲನೆಯಲ್ಲಿವೆ.
ಇ)	ಸದರಿ ಸೌಲಭ್ಯಕ್ಕಾಗಿ ಸರ್ಕಾರದಿಂದ ಎಷ್ಟು ಬಗೆಯ ಶುಲ್ಕಗಳನ್ನು ವಿಧಿಸಲಾಗುವುದು; ಅವುಗಳ ಪ್ರಮಾಣವೆಷ್ಟು;	ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
ಈ)	'ಬಿ' ಖಾತಾದಿಂದ ಎ ಖಾತಾಗೆ ಪರಿವರ್ತನೆಗೆ ವಿಧಿಸಿರುವ ಶುಲ್ಕ ದುಬಾರಿಯಾಗಿದ್ದು ಜನ ಸಾಮಾನ್ಯರಿಗೆ ಹೊರೆಯಾಗುವುದಿಲ್ಲವೇ; ಸದರಿ ಶುಲ್ಕವನ್ನು ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಎಷ್ಟು ಮಾಡಲಾಗುವುದು;	• ಜನ ಸಾಮಾನ್ಯರಿಗೆ ಹೊರೆಯಾಗಿರುವುದು ಕಂಡುಬಂದಿರುವುದಿಲ್ಲ. • ಶುಲ್ಕವನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಉ)	ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ಖಾತಾ ಪರಿವರ್ತನೆ ಮಾಡಲಾಗುವುದು; ಇದರ ಪ್ರಕ್ರಿಯೆ ಏನು;	• ಅರ್ಜಿಗಳನ್ನು ವಿಲೇವಾರಿ ಮಾಡಲು 45 ದಿನಗಳನ್ನು ನಿಗದಿಪಡಿಸಲಾಗಿದೆ. • ಪ್ರಕ್ರಿಯೆಯ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ.
ಊ)	ಭೂಮಿಯ ಮೌಲ್ಯವನ್ನು ಯಾವ ರೀತಿಯಲ್ಲಿ ಲೆಕ್ಕ ಹಾಕಲಾಗುವುದು? (ಪತ್ರದಲ್ಲಿ ಚದರ ಅಡಿ ಮತ್ತು ಗುಂಟೆಯ ಲೆಕ್ಕದಲ್ಲಿ ಇರುವ ಆಸ್ತಿಗಳ ಮೌಲ್ಯ)	ಮಾಹಿತಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ.

ನಅಇ 605 ಎಂಎನ್‌ಯು 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಅನುಬಂಧ -1

ಕ್ರ.ಸಂ	ವಿವರಗಳು	ನಿಗಧಿಪಡಿಸಲಾಗಿರುವ ಶುಲ್ಕ
1	ಆರಂಭಿಕ ಪರಿಶೀಲನಾ ಶುಲ್ಕ	ರೂ.500 ಪ್ರತಿ ಅರ್ಜಿಗೆ
2	2000 ಚ.ಮೀ.ವರೆಗೆ	ಮಾರ್ಗ ಸೂಚಿ ಮೌಲ್ಯದ ಶೇ.5% ರಷ್ಟು ದರ
3	2000 ಚ.ಮೀಗಳಿಗೆ ಮೇಲ್ಪಟ್ಟು 4000 ಚ.ಮೀಗಳವರೆಗೆ	ಮಾರ್ಗಸೂಚಿ ಮೌಲ್ಯದ ಶೇ.10% ರಷ್ಟು ದರ ಅಥವಾ ಏಕ ನಿವೇಶನ ಪ್ರದೇಶದ ಶೇ.10% ರಷ್ಟು ನಿರಂತರ ಭೂಮಿಯ ಒಂದು ಭಾಗವನ್ನು ಉದ್ಯಾನವನಕ್ಕಾಗಿ ಕಾಯ್ದಿರಿಸಿ ಸದರಿ ವಿಸ್ತೀರ್ಣವನ್ನು ಉಚಿತವಾಗಿ ಹಸ್ತಾಂತರಿಸಬೇಕಾಗಿರುತ್ತದೆ.
4	4000 ಚ.ಮೀಗಳಿಗೆ ಮೇಲ್ಪಟ್ಟು 10000 ಚ.ಮೀ.ಗಳವರೆಗೆ	ಉದ್ಯಾನವನಗಳು ಮತ್ತು ವಾಹನ ನಿಲುಗಡೆ ಪ್ರದೇಶವನ್ನು ಉಚಿತವಾಗಿ ಪರಿತ್ಯಾಜ್ಯನ ಪತ್ರದ ಮೂಲಕ ಹಸ್ತಾಂತರಿಸಬೇಕಾಗಿರುತ್ತದೆ.
5	ಭೂಪರಿವರ್ತನೆ ಆಗದೇ ಇದ್ದಲ್ಲಿ	ಭೂಪರಿವರ್ತನೆ ದಂಡ
6		ದಿನಾಂಕ : 16-07-2025ರ ಅಧಿಸೂಚನೆ ಮತ್ತು ಇತರೆ ಅಧಿಸೂಚನೆಯ ಪ್ರಕಾರ ಅನ್ವಯವಾಗುವ ಶುಲ್ಕಗಳು
7		ಏಕ ನಿವೇಶನ ಅನುಮೋದನೆಗೆ ಅನ್ವಯವಾಗುವ ಇತರೆ ಶಾಸನಬದ್ಧ ಶುಲ್ಕಗಳು
8	5 ಗುಂಟೆಗಳವರೆಗೆ (5445 ಚ.ಅಡಿ ಅಥವಾ 505.85 ಚ.ಮೀ)	ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲ ಅಭಿವೃದ್ಧಿಪಡಿಸಿದ ನಿವೇಶನದ ದರ.
9	5 ಗುಂಟೆಗಳಿಗೂ ಮೇಲ್ಪಟ್ಟು (5445 ಚ.ಅಡಿ ಅಥವಾ 505.85 ಚ.ಮೀ) 7.50 ಗುಂಟೆಗಳವರೆಗೆ (8167.5 ಚ.ಅಡಿ ಅಥವಾ 756.78 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.70% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
10	7.50 ಗುಂಟೆಗಳಿಗೂ ಮೇಲ್ಪಟ್ಟು (8167.5 ಚ.ಅಡಿ ಅಥವಾ 758.78 ಚ.ಮೀ) 10 ಗುಂಟೆಗಳವರೆಗೆ (10890 ಚ.ಅಡಿ ಅಥವಾ 1011.7 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.65% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ

11	10 ಗುಂಟೆಗಳಿಗೂ ಮೇಲ್ಪಟ್ಟು (10890 ಚ.ಅಡಿ ಅಥವಾ 1011.7 ಚ.ಮೀಟರ್) 20 ಗುಂಟೆಗಳವರೆಗೆ (21780 ಚ.ಅಡಿ ಅಥವಾ 2023.4 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.60% ರಷ್ಟು ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
12	20 ಗುಂಟೆಗಳಿಗೂ ಮೇಲ್ಪಟ್ಟು (21780 ಚ.ಅಡಿ ಅಥವಾ 2023.4 ಚ.ಮೀಟರ್) 40 ಗುಂಟೆಗಳವರೆಗೆ (43560 ಚ.ಅಡಿಗಳು ಅಥವಾ 4046.86 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.55% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
13	1 ಎಕರೆಗೂ ಮೇಲ್ಪಟ್ಟು (43560 ಚ.ಅಡಿಗಳು ಅಥವಾ 4046.86 ಚ.ಮೀಟರ್‌ಗಳು)	i) ಕೈಗಾರಿಕಾ + ಕೃಷಿ ಭೂಮಿಯ ದರ + ಶೇ.55 ರಷ್ಟು ಕೃಷಿ ಭೂಮಿಯ ದರ ii) ವಾಸದ ಉಪಯೋಗ = ಕೃಷಿ ಭೂಮಿಯ ದರ - ಶೇ.65% ಕೃಷಿ ಭೂಮಿಯ ದರ iii) ವಾಣಿಜ್ಯ = ಕೃಷಿ ಭೂಮಿಯ ದರ ಶೇ.80 ರಷ್ಟು ಕೃಷಿ ಭೂಮಿಯ ದರ

11	10 ಗುಂಟೆಗಳಿಗೂ ಮೇಲ್ಪಟ್ಟು (10890 ಚ.ಅಡಿ ಅಥವಾ 1011.7 ಚ.ಮೀಟರ್) 20 ಗುಂಟೆಗಳವರೆಗೆ (21780 ಚ.ಅಡಿ ಅಥವಾ 2023.4 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.60% ರಷ್ಟು ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
12	20 ಗುಂಟೆಗಳಿಗೂ ಮೇಲ್ಪಟ್ಟು (21780 ಚ.ಅಡಿ ಅಥವಾ 2023.4 ಚ.ಮೀಟರ್) 40 ಗುಂಟೆಗಳವರೆಗೆ (43560 ಚ.ಅಡಿಗಳು ಅಥವಾ 4046.86 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.55% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
13	1 ಎಕರೆಗೂ ಮೇಲ್ಪಟ್ಟು (43560 ಚ.ಅಡಿಗಳು ಅಥವಾ 4046.86 ಚ ಮೀಟರ್‌ಗಳು)	i) ಕೈಗಾರಿಕಾ + ಕೃಷಿ ಭೂಮಿಯ ದರ + ಶೇ.55 ರಷ್ಟು ಕೃಷಿ ಭೂಮಿಯ ದರ ii) ವಾಸದ ಉಪಯೋಗ - ಕೃಷಿ ಭೂಮಿಯ ದರ - ಶೇ.65% ಕೃಷಿ ಭೂಮಿಯ ದರ iii) ವಾಣಿಜ್ಯ = ಕೃಷಿ ಭೂಮಿಯ ದರ ಶೇ.80 ರಷ್ಟು ಕೃಷಿ ಭೂಮಿಯ ದರ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ "ಎ" ಮತ್ತು "ಬಿ" ಖಾತಾ ನೀಡುವುದನ್ನು ನಿಯಂತ್ರಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮು.ಆ/ಬೃಬೆಂಮಪಾ/ಪಿಆರ್/(G)500/2024-25, ದಿನಾಂಕ: 22-05-2025.

* * * * *

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 22-05-2025ರ ಪತ್ರದಲ್ಲಿ, ಬೆಂಗಳೂರು ನಗರವು ದೇಶದಲ್ಲಿಯೇ ಅತ್ಯಂತ ವೇಗವಾಗಿ ವಿಸ್ತಾರಗೊಳ್ಳುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ನಗರವಾಗಿರುತ್ತದೆ. ನಗರವು ಎದುರಿಸಬೇಕಾದ ಸವಾಲುಗಳು ಮತ್ತು ಅದರ ವ್ಯವಸ್ಥಿತ ಮತ್ತು ಸಂಘಟಿತ ಬೆಳವಣಿಗೆ, ಅಭಿವೃದ್ಧಿಯ ಅಗತ್ಯತೆಯನ್ನು ಕಡೆಗಣಿಸುವಂತಿಲ್ಲ. ಅನಿಯಂತ್ರಿತ ಮತ್ತು ಅವ್ಯವಸ್ಥಿತವಾದ ಬೆಳವಣಿಗೆಯು, ಈಗ ನಗರವು ಎದುರಿಸುತ್ತಿರುವ ಹೆಚ್ಚಿನ ತೊಂದರೆಗಳು ಅಂದರೆ, ಅಸುರಕ್ಷತೆ ಮತ್ತು ಅನಿಯಂತ್ರಿತ ನಿರ್ಮಾಣಗಳು, ಅಸುರಕ್ಷಿತ ಕಟ್ಟಡಗಳಿಂದ ಪ್ರಾಣಕ್ಕೆ ತೊಂದರೆ, ಕಳಪೆ ನಾಗರಿಕ ಸೌಕರ್ಯಗಳು, ಪ್ರವಾಹ ಮತ್ತು ಇಕ್ಕಟ್ಟು ಬೀದಿಗಳಿಂದ ಉಸಿರುಗಟ್ಟುವಿಕೆ, ಕಾವೇರಿ ನೀರು ಸರಬರಾಜು ಮಾಡುವ ಸವಾಲು, ಇತ್ಯಾದಿ ತೊಂದರೆಗಳಿಗೆ ದಾರಿ ಮಾಡಿಕೊಟ್ಟಿರುತ್ತದೆ.

ಅನಧಿಕೃತ ಕಟ್ಟಡಗಳು ಮತ್ತು ಯೋಜಿತವಲ್ಲದ ಅಭಿವೃದ್ಧಿಯಿಂದ ಲಕ್ಷಾಂತರ ಸ್ವತ್ತುಗಳಿಗೆ 'ಬಿ' ಖಾತಾ ನೀಡಲು ಕಾರಣವಾಗಿದ್ದು, ಇದನ್ನು ನಿಯಂತ್ರಿಸಿ, ಹಿಡಿತದಲ್ಲಿಡಬೇಕಾಗಿರುತ್ತದೆ. ಪ್ರಸ್ತುತ, 'ಬಿ' ಖಾತಾ ಆಸ್ತಿಯು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 (ಕೆ.ಟಿ.ಸಿ.ಪಿ. ಕಾಯ್ದೆ)ಯ ವೀಕ್ಷಣೆ ಮತ್ತು ವ್ಯಾಪ್ತಿಯ ಹೊರಗಿರುತ್ತದೆ. 'ಬಿ' ಖಾತಾ ಆಸ್ತಿಗಳಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳನ್ನು ನಿಯಂತ್ರಿಸಲಾಗದೆ, ಅದು ಪೂರ್ಣ ಪ್ರಮಾಣದಲ್ಲಿ ನಿಯಮಗಳ ಉಲ್ಲಂಘನೆಯಾಗಿ, ಅಸುರಕ್ಷಿತ ಕಟ್ಟಡಗಳ ನಿರ್ಮಾಣಕ್ಕೆ ಕಾರಣವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಮಳೆಗಾಲದಲ್ಲಿ 'ಬಿ' ಖಾತಾ ಆಸ್ತಿಗಳಲ್ಲಿ ನಿರ್ಮಿಸಿದ್ದ ಕಟ್ಟಡಗಳು ಕುಸಿದು ಬಿದ್ದು, ಕೆ.ಟಿ.ಸಿ.ಪಿ ಕಾಯ್ದೆ, 1961ರ ವಿರುದ್ಧವಾಗಿ, ನಿಯಂತ್ರಣವಿಲ್ಲದೆ ನಿರ್ಮಿಸಲಾಗಿರುತ್ತವೆ. ಇಂತಹ ಆಸ್ತಿಗಳು ಸಾಮಾನ್ಯವಾಗಿ ಎಲ್ಲಾ ಸೌಲಭ್ಯಗಳನ್ನು ಅಂದರೆ ರಸ್ತೆ, ಮೋರಿ ಮತ್ತು ಇತರ ಎಲ್ಲಾ ನಾಗರಿಕ (ಪೌರ) ಸೌಲಭ್ಯಗಳನ್ನು ಹೊಂದಿರುತ್ತವೆ. ಆದರೆ, ಕೆ.ಟಿ.ಸಿ.ಪಿ. ಕಾಯ್ದೆ, 1961ರ ನಿಯಂತ್ರಣ ಮತ್ತು ವ್ಯಾಪ್ತಿಯ ಹೊರಗಡೆ ಇರುತ್ತವೆ. ಆದ್ದರಿಂದ, ಇಂತಹ 'ಬಿ'

ಲಕ್ಷ್ಮೀಸಾಗರ್ ಎಸ್ ಕೆ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) - 1

ಖಾತಾ ಆಸ್ತಿಗಳನ್ನು ಸಹ ಕೆ.ಟಿ.ಸಿ.ಪಿ. ಕಾಯ್ದೆ, 1961ರ ನಿಯಂತ್ರಣ ಮತ್ತು ವ್ಯಾಪ್ತಿಗೆ ತರುವ ಆವಶ್ಯಕತೆ ಇರುತ್ತದೆ. ದಿನಾಂಕ: 30.09.2024ರ ನಂತರ ರಚಿಸಿರುವ ಅಥವಾ ನಿರ್ಮಿಸಲಾಗಿರುವ ಅನಧಿಕೃತ ಆಸ್ತಿಗಳಿಗೆ ' ಬಿ ' ಖಾತಾ ನೀಡುವುದನ್ನು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 (ಜಿ.ಬಿ.ಜಿ. ಕಾಯ್ದೆ-2024)ರ ಉಪ ಕಲಂ 3ರ ಕಲಂ 147 ನಿಷೇಧಿಸುತ್ತದೆ.

ಈ ಮೇಲ್ಕಂಡ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಲು ಮತ್ತು ಶಿಫಾರಸ್ಸನ್ನು ನೀಡುವ ಸಲುವಾಗಿ ಬಿ.ಬಿ.ಎಂ.ಪಿ. ಮುಖ್ಯ ಆಯುಕ್ತರ ಆದೇಶ ಸಂಖ್ಯೆ. No:CC/BBMP/PR/9222/24-25, ದಿನಾಂಕ: 14.11.2024 ಬಿ.ಬಿ.ಎಂ.ಪಿ.ಯ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗಿತ್ತು:

1)	ವಿಶೇಷ ಆಯುಕ್ತರು (ಕಂದಾಯ)	ಅಧ್ಯಕ್ಷರು
2)	ವಿಶೇಷ ಆಯುಕ್ತರು (ಯೋಜನೆ)	ಸದಸ್ಯರು
3)	ಇಂಜಿನಿಯರ್ ಇನ್‌ಚೀಫ್	ಸದಸ್ಯರು
4)	ಮುಖ್ಯ ನಗರ ಯೋಜಕರ	ಸದಸ್ಯರು
5)	ಕಾನೂನು ಕೋಶದ ಮುಖ್ಯಸ್ಥರು	ಸದಸ್ಯರು
6)	ಹೆಚ್ಚುವರಿ ನಿರ್ದೇಶಕರು ನಗರ ಯೋಜನೆ	ಸದಸ್ಯರು
7)	ಜಂಟಿ ನಿರ್ದೇಶಕರು ನಗರ ಯೋಜನೆ (ಉತ್ತರ)	ಸದಸ್ಯರು
8)	ಜಂಟಿ ನಿರ್ದೇಶಕರು ನಗರ ಯೋಜನೆ (ದಕ್ಷಿಣ)	ಸದಸ್ಯರು

ಈ ಸಮಿತಿಯು ಸುದೀರ್ಘವಾಗಿ ಪರಿಶೀಲಿಸಿ, ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ, 1976ಕ್ಕೆ ತಿದ್ದುಪಡಿ ಮಾಡಿ ಸೆಕ್ಷನ್ 108ಎ ಅನ್ನು ಸೇರ್ಪಡೆ ಮಾಡಿ ಜಾರಿಗೆ ತಂದ ನಂತರ, ಬಿ.ಬಿ.ಎಂ.ಪಿ.ಯಲ್ಲಿ ಅನಧಿಕೃತ ಆಸ್ತಿಗಳಿಗೆ ಬಿ-ಖಾತಾವನ್ನು ನೀಡುವ ಕ್ರಮವು 2009ನೇ ಸಾಲಿನಲ್ಲಿಯೇ ಜಾರಿಗೆ ಬಂದಿರುವುದಾಗಿ ತಿಳಿಸಲಾಗಿದೆ. ಆದ್ದರಿಂದ, ಅನಧಿಕೃತ ಆಸ್ತಿಗಳಿಗೆ ಬಿ-ಖಾತಾವನ್ನು ನೀಡುವ ಪರಿಕಲ್ಪನೆ ಅಥವಾ ಆಯ್ಕೆ ಇರಲಿಲ್ಲವಾದ್ದರಿಂದ, 2009ರ ಒಳಗೆ ನೀಡಿರುವ ಎಲ್ಲಾ ಖಾತಾಗಳು ಎ-ಖಾತಾ ಅಥವಾ ಕ್ರಮಬದ್ಧವಾದ ಖಾತಾಗಳಾಗಿರುತ್ತದೆ ಎಂದು ತಿಳಿಸಿಲಾಗಿದೆ.

The Section 17 of the KTCP Act, 1961 was amended in the year 2020 and a provision was inserted mandating obtaining of "Single Plot" approval or sanction under the said Section apart from sanction of a "Layout by sub dividing a plot". It is to be noted that prior to the said amendment dated: 22-05-2020, the section 17 prescribed obtaining of sanction only in context of "sub-division of plot or layout of private street" but not in context of Single Plot" approval/sanction.

ಲಕ್ಷ್ಮೀಸಾಗರ್ ...
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬೆ.ಮ.ಪಾ)-1

ಮುಂದುವರೆದು, ದಿನಾಂಕ: 05.07.2021 ರಂದು ಕೆ.ಟಿ.ಸಿ.ಪಿ.. ಕಾಯ್ದೆಗೆ ತಿದ್ದುಪಡಿ ಮೂಲಕ ಸೆಕ್ಷನ್ 17ಕ್ಕೆ ಉಪ ಕಲಂ 2-ಇ ಅನ್ನು ಸೇರ್ಪಡೆ ಮಾಡಿ, ಇದರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961 ರಡಿ ಯೋಜನಾ ಪ್ರಾಧಿಕಾರದಿಂದ ಬಿಡುಗಡೆ ಮಾಡದಿರುವ ಯಾವುದೇ ನಿವೇಶನ ಕಟ್ಟಡಗಳಿಗೆ (building site) ಖಾತಾ ಅಥವಾ ಇ-ಖಾತಾ ನೀಡುವುದನ್ನು ನಿಷೇಧಿಸಲಾಗಿರುತ್ತದೆ.

ಆದಾಗ್ಯೂ, ಈ ತಿದ್ದುಪಡಿಗಳನ್ನು ತರುವ ಮೊದಲೇ ಕೆ.ಟಿ.ಸಿ.ಪಿ. ಕಾಯ್ದೆ, 1961ರ ಪ್ರಕಾರ ಮಂಜೂರಾದ ಬಡಾವಣೆಗಳ ನಿವೇಶನಗಳಿಗೆ, ಎ-ಖಾತಾವನ್ನು ನೀಡುವುದರ ಜೊತೆಗೆ, ಬಿ.ಬಿ.ಎಂ.ಪಿ.ಯು "ಏಕ ನಿವೇಶನ (Single Plot)"ಗಳಿಗೂ ಸಹ ಎ-ಖಾತಾವನ್ನು ನೀಡಲಾಗಿರುತ್ತದೆ.

ಈ ಕೆಳಕಂಡಂತಹ ರೀತಿಯಲ್ಲಿ ಆಸ್ತಿಗಳಿಗೆ ಎ-ಖಾತಾ & ಬಿ ಖಾತಾಗಳನ್ನು ನೀಡಲಾಗುತ್ತಿತ್ತು:

i) ಕರ್ನಾಟಕ ಭೂಕಂದಾಯ ಕಾಯ್ದೆ, 1964 (ಕೆಎಲ್‌ಆರ್ ಕಾಯ್ದೆ 1964) ರ ಸೆಕ್ಷನ್ 95 ರಡಿ ಕೃಷಿ ಜಮೀನನ್ನು, ಕೃಷಿಯೇತರ ಉದ್ದೇಶಗಳಿಗೆ ಬದಲಾವಣೆಗೊಂಡ ಯಾವುದೇ ವಿಸ್ತೀರ್ಣದ ಭೂಮಿಗೆ ಮತ್ತು ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ ಜಾಗಕ್ಕೆಎ-ಖಾತಾ ನೀಡಲಾಗುತ್ತಿತ್ತು.

ii) 6000 ಚದರ ಅಡಿವರೆಗಿನ ಕಂದಾಯ ನಿವೇಶನಗಳಿಗೆ, ಅದರಲ್ಲಿ ಕಟ್ಟಡ ನಿರ್ಮಿಸಿದ್ದಲ್ಲಿ ಬಿ-ಖಾತಾವನ್ನು ನೀಡಲಾಗುತ್ತಿತ್ತು.

iii) ಅನಧಿಕೃತ ಕಟ್ಟಡ ನಿರ್ಮಿಸಲಾದ ಯಾವುದೇ ನಿವೇಶನಗಳು, ಅನಧಿಕೃತ ಬಡಾವಣೆಗಳ ನಿವೇಶನಗಳು, ಕರ್ನಾಟಕ ಭೂಕಂದಾಯ ಕಾಯ್ದೆ, ಕಲಂ 95ರಡಿ ಪರಿವರ್ತಿತಗೊಂಡ ಜಮೀನುಗಳಲ್ಲಿ ನಿರ್ಮಿಸಲಾದ ವಿಭಜಿತ ನಿವೇಶನಗಳಿಗೆ ಬಿ-ಖಾತಾವನ್ನು ನೀಡಲಾಗುತ್ತಿತ್ತು.

iv) ಕೃಷಿಯೇತರ ಉದ್ದೇಶಕ್ಕೆ ಸರ್ಕಾರವು ಮಂಜೂರು ಮಾಡಿದ ಜಾಗಗಳಿಗೆ ಎ-ಖಾತಾವನ್ನು ನೀಡಲಾಗುತ್ತಿತ್ತು.

v) ಕೆ.ಐ.ಎ.ಡಿ.ಬಿ., ಕೆ.ಹೆಚ್.ಬಿ., ಕೆ.ಎಸ್.ಎಸ್.ಐ.ಡಿ.ಸಿ ಅಭಿವೃದ್ಧಿಪಡಿಸಿ ಮೂಲಸೌಕರ್ಯ ಒದಗಿಸಿ, ಬಿ.ಬಿ.ಎಂ.ಪಿ.ಗೆ ಹಸ್ತಾಂತರಿಸಲಾದ ಬಡಾವಣೆಗಳ ನಿವೇಶನಗಳಿಗೆ ಎ-ಖಾತಾವನ್ನು ನೀಡಲಾಗುತ್ತಿತ್ತು.

vi) ಕೆ.ಐ.ಎ.ಡಿ.ಬಿ., ಕೈಗಾರಿಕಾ ಬಡಾವಣೆಗಳಲ್ಲಿ ಏಕಘಟಕ ಪ್ಲಾಟ್‌ಗಳಿಗೆ ಎ-ಖಾತಾವನ್ನು ನೀಡಲಾಗುತ್ತಿತ್ತು.

ನಗರಾಭಿವೃದ್ಧಿ ಇಲಾಖೆ

ಬಿ.ಬಿ.ಎಂ.ಪಿ.ಯು ದಿನಾಂಕ: 30.09.2024 ರವರೆಗೆ ಮೇಲ್ಕಂಡ ವರ್ಗದ ಆಸ್ತಿಗಳಿಗೆ ಈ ಕೆಳಕಂಡ ಸುತ್ತೋಲೆಗಳನ್ನು ಆಧರಿಸಿ ಎ-ಖಾತಾವನ್ನು ನೀಡಿರುತ್ತದೆ:

1) ಬಿ.ಬಿ.ಎಂ.ಪಿ. ಆಯುಕ್ತರ ಸುತ್ತೋಲೆ ಸಂಖ್ಯೆ. DC(R) PR: 23: 2007-08, ದಿನಾಂಕ: 27-01-2009.
2) ನಗರಾಭಿವೃದ್ಧಿ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ನಅಇ 452 ಎಂಎನ್‌ಯು 2009, ದಿನಾಂಕ: 03-02-2010.
3) ಬಿ.ಬಿ.ಎಂ.ಪಿ. ಆಯುಕ್ತರ ಸುತ್ತೋಲೆ ಸಂಖ್ಯೆ. DC(R) PR:23:2007-08, ದಿನಾಂಕ: 07-02-2011.
4) ಬಿ.ಬಿ.ಎಂ.ಪಿ. ಆಯುಕ್ತರ ಸುತ್ತೋಲೆ ಸಂಖ್ಯೆ. DC(R) PR:3365: 2011-12, ದಿನಾಂಕ: 28-09-2012.
5) ಬಿ.ಬಿ.ಎಂ.ಪಿ. ಆಯುಕ್ತರ ಸುತ್ತೋಲೆ ಸಂಖ್ಯೆ. DC(R) PR : 3365 : 2011-12, ದಿನಾಂಕ: 01-07-2014.
6) ಬಿ.ಬಿ.ಎಂ.ಪಿ. ಆಯುಕ್ತರ ಸುತ್ತೋಲೆ ಸಂಖ್ಯೆ. DC(R) PR:4214:2014-15, ದಿನಾಂಕ: 20-10-2014.

ಬಿ.ಬಿ.ಎಂ.ಪಿ.ಯು ದಿನಾಂಕ: 03.10.2024ರ ಸುತ್ತೋಲೆಯಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961ರ ಸೆಕ್ಷನ್ 17ರಡಿ ಅನುಮೋದನೆ ಪಡೆಯದೇ ಇರುವ ಸ್ವತ್ತುಗಳಿಗೆ ಎ-ಖಾತಾ ನೀಡುವುದನ್ನು ನಿಲ್ಲಿಸಿರುತ್ತದೆ. ಈ ಸುತ್ತೋಲೆಯು, ಮೇಲ್ಕಂಡ ಎಲ್ಲಾ ಸುತ್ತೋಲೆಗಳನ್ನು ರದ್ದುಪಡಿಸಿರುತ್ತದೆ. ಕೆ.ಟಿ.ಸಿ.ಪಿ. ಕಾಯ್ದೆ, 1961 ಅಡಿ 2020 ರ ತಿದ್ದುಪಡಿಗೆ ಮುನ್ನ, "ಏಕ ನಿವೇಶನ /ಪ್ಲಾಟ್" (Single Plot) ಗಳಿಗೆ ಅನುಮೋದನೆ ನೀಡುವ ಕುರಿತು ಈ ಕಾಯ್ದೆಯು ಕೇವಲ ಮೌನವಾಗಿದ್ದು, ನಿಷೇಧಿಸಿರುವುದಿಲ್ಲವಾದ್ದರಿಂದ 2020 ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ, 1961 ಅನ್ನು ತಿದ್ದುಪಡಿ ಮಾಡುವ ಮುನ್ನ ನೀಡಲಾದ ಎ-ಖಾತಾಗಳನ್ನು ಈ ಶೂನ್ಯವನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವೆಂದು ಅರ್ಥೈಸಿಕೊಳ್ಳಬಹುದು. ಆದಾಗ್ಯೂ, 2020 ರಲ್ಲಿ ತಿದ್ದುಪಡಿಯಾದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು "ಏಕ ನಿವೇಶನ" (Single Plot) ಗಳಿಗೆ ಅನುಮೋದನೆ ನೀಡುವ ಬಗ್ಗೆ ಯಾವುದೇ ವ್ಯವಸ್ಥೆಯನ್ನು ಕಾರ್ಯಗತಗೊಳಿಸದೇ ಇದ್ದುದರಿಂದ, ಬಿ.ಬಿ.ಎಂ.ಪಿ.ಯು ಮೇಲ್ಕಂಡ ಸುತ್ತೋಲೆಗಳನ್ನು ಆಧರಿಸಿ ಎ-ಖಾತಾ ನೀಡುವುದನ್ನು ಮುಂದುವರೆಸಿರುತ್ತದೆ.

ಅಂತಿಮವಾಗಿ, ಸದರಿ ವ್ಯವಸ್ಥೆಯನ್ನು ದಿನಾಂಕ: 03.10.2024ರಂದು ನಿಲ್ಲಿಸಲಾಗಿರುತ್ತದೆ ಮತ್ತು ಈ ಸಮಸ್ಯೆಯನ್ನು ಬಗೆಹರಿಸಲು, ಒಂದು ಸಮಗ್ರ ನಿಲುವನ್ನು ತೆಗೆದುಕೊಳ್ಳಲು ಬಿ.ಬಿ.ಎಂ.ಪಿ.ಯು ದಿನಾಂಕ: 24.02.2025 ರಂದು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಪ್ರಸ್ತಾಪಿಸಿರುತ್ತದೆ. ಈಗ ಈ ಪ್ರಸ್ತಾಪನೆಗಳ ಆಧಾರದ ಮೇಲೆ ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ 790 ಎಂಎನ್‌ಯು 2024, ದಿನಾಂಕ: 07.04.2025 ರಲ್ಲಿ, 2.5

ಲಕ್ಷ್ಮೀಸಾಗರ್ ... ಕೆ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬೆಂಮಪ್ರಾ) - 1

ಎಕರೆ ವಿಸ್ತೀರ್ಣದ "ಏಕ ನಿವೇಶನ" (Single Plot) ಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಬಿ.ಬಿ.ಎಂ.ಪಿ.ಗೆ ಪ್ರತ್ಯಾಯೋಜಿಸಿದೆ. ಮುಂದುವರೆದು, ಬಿ.ಬಿ.ಎಂ.ಪಿ. ಕಾಯ್ದೆ, 2020ರ ಸೆಕ್ಷನ್ 225 ಮತ್ತು 226 ಅನ್ನು ದಿನಾಂಕ: 15.04.2025 ರಲ್ಲಿ ತಿದ್ದುಪಡಿ ಮಾಡಿ, ಖಾಸಗಿ ರಸ್ತೆಗಳು / ಬೀದಿಗಳನ್ನು, "ಸಾರ್ವಜನಿಕ ರಸ್ತೆ / ಬೀದಿ" ಗಳೆಂದು ಘೋಷಿಸಲು ಅವಕಾಶ ಕಲ್ಪಿಸಲಾಗಿದೆ. ಇದು "ಏಕ ನಿವೇಶನ" (Single Plot) ಗಳನ್ನು ಮತ್ತು ಕೆ.ಟಿ.ಸಿ.ಪಿ. ಕಾಯ್ದೆ, 1961ರ ಇತರೆ ಅವಕಾಶಗಳನ್ನು ವ್ಯವಸ್ಥಿತ ಮತ್ತು ಸಮರ್ಪಕವಾದ ರೀತಿಯಲ್ಲಿ ಜಾರಿಗೊಳಿಸಲು ಮತ್ತು ಅವ್ಯವಸ್ಥೆಯನ್ನು ನಿಯಂತ್ರಿಸಲು ಸಹಕಾರಿಯಾಗಿರುತ್ತದೆ.

ಈ ಮೇಲ್ಕಂಡ ಕಾರಣಗಳ ಹಿನ್ನಲೆಯಲ್ಲಿ, ಬೆಂಗಳೂರು ನಗರದಲ್ಲಿ ಅಭಿವೃದ್ಧಿ ಮತ್ತು ನಿರ್ಮಾಣಗಳನ್ನು ನಿಯಂತ್ರಿಸುವ ಮತ್ತು ಶಿಸ್ತನ್ನು ತರುವ ಉದ್ದೇಶದಿಂದ ಸರ್ಕಾರವು ಈಗಾಗಲೇ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:

i) ಬಿ.ಬಿ.ಎಂ.ಪಿ. ಕಾಯ್ದೆ, 2020 ಅನ್ನು ತಿದ್ದುಪಡಿ ಮಾಡಿದ್ದು, ಸೆಕ್ಷನ್ 248ಕ್ಕೆ ಉಪ ಕಲಂ(5) ಅನ್ನು ಸೇರ್ಪಡೆ ಮಾಡಲಾಗಿದೆ. ಇದರಿಂದ, ಕಾನೂನುಬಾಹಿರ ಕಟ್ಟಡಗಳನ್ನು ನಿರ್ಮಿಸುವುದನ್ನು ನಿರ್ಬಂಧಿಸಿ, ಕಟ್ಟಡಗಳನ್ನು ನೆಲಸಮಗೊಳಿಸುವುದನ್ನು ಬಾಕಿ ಇರಿಸಿ, ಕಾನೂನುಬಾಹಿರ ಕಟ್ಟಡಗಳ ಭಾಗಗಳನ್ನು ತಕ್ಷಣವೇ ಮೊಹರುಗೊಳಿಸಲು(Sealing) ಅವಕಾಶವನ್ನು ಕಲ್ಪಿಸಲಾಗಿದೆ.

ii) ಬಿ.ಬಿ.ಎಂ.ಪಿ. ಕಾಯ್ದೆ, 2020ಕ್ಕೆ ಸೆಕ್ಷನ್ 225 ಮತ್ತು 226 ಅನ್ನು ತಿದ್ದುಪಡಿ ಮಾಡಿ, ಅನಧಿಕೃತ ಬಡಾವಣೆಗಳ ಖಾಸಗಿ ರಸ್ತೆಗಳನ್ನು ಸಾರ್ವಜನಿಕ ರಸ್ತೆಗಳೆಂದು ಘೋಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ ಮತ್ತು ಅಂತಹ ಅನಧಿಕೃತವಾಗಿ ನಿರ್ಮಿಸಲಾದ ಬಡಾವಣೆಯಲ್ಲಿ ರಚಿಸಿದ ರಸ್ತೆಗಳನ್ನು ಸಾರ್ವಜನಿಕ ರಸ್ತೆಗಳೆಂದು ಘೋಷಿಸಿದಾಗ, ಅಂತಹ ರಸ್ತೆಗಳಿಗೆ ಭೂಮಾಲೀಕರು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ. ಈ ಅವಕಾಶವು ಜಿ.ಬಿ.ಜಿ. ಕಾಯ್ದೆ, 2024ರ ಸೆಕ್ಷನ್ 212 ರಲ್ಲಿಯೂ ಇದೆ.

iii) ಜಿ.ಬಿ.ಜಿ. ಕಾಯ್ದೆ, 2024 ಈ ಎಲ್ಲಾ ಅಂಶಗಳನ್ನು ಸೂಕ್ತವಾಗಿ ಪರಿಹರಿಸಿದೆ ಮತ್ತು ನಿಯಂತ್ರಿಸುತ್ತದೆ.

iv) ಕಂದಾಯ ಇಲಾಖೆಯು ದಿನಾಂಕ: 01.11.2024 ರಿಂದ ಜಾರಿಗೆ ಬರುವಂತೆ, ಬೆಂಗಳೂರು ನಗರದಲ್ಲಿ ಯಾವುದೇ ಆಸ್ತಿಗಳಿಗೆ ಅಥವಾ ಭೂಮಿಗೆ ಬಿ.ಬಿ.ಎಂ.ಪಿ. ಅಥವಾ ಬಿ.ಡಿ.ಎ. ಯಿಂದ ನೀಡಲಾದ ಸೂಕ್ತವಾದ ಇ-ಖಾತಾ (ಅಥವಾ ಕೃಷಿ ಜಮೀನಿಗೆ ಕಂದಾಯ ಇಲಾಖೆಯಿಂದ ಆರ್.ಟಿ.ಸಿ.) ಇಲ್ಲದಿದ್ದಲ್ಲಿ ನೋಂದಣಿಯನ್ನು ಸಂಪೂರ್ಣವಾಗಿ ನಿರ್ಬಂಧಿಸಿರುತ್ತದೆ.

ಲಕ್ಷ್ಮೀಸಾಗರ ... ಕ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) - 1

v) ಇದು ಬೆಂಗಳೂರು ನಗರದಲ್ಲಿ ಅನಧಿಕೃತ ನಿವೇಶನ ಮತ್ತು ಸ್ವತ್ತುಗಳನ್ನು ಇ-ಖಾತಾ ಇಲ್ಲದೇ ನೋಂದಣಿ ಮಾಡುವುದನ್ನು ನಿರ್ಬಂಧಿಸಿದೆ.

ಆದ್ದರಿಂದ, ಅನಧಿಕೃತ ಕಟ್ಟಡಗಳು ಮತ್ತು ಬಡಾವಣೆಗಳ ಅಭಿವೃದ್ಧಿಗಳನ್ನು ನಿಯಂತ್ರಿಸಲು ಮತ್ತು ತಡೆಗಟ್ಟಲು, ಈಗಾಗಲೇ ಕಾನೂನು ಮತ್ತು ನಿಯಂತ್ರಣ ಚೌಕಟ್ಟನ್ನು ಖಾತರಿಪಡಿಸಲು ತಿದ್ದುಪಡಿ ಮಾಡಲಾಗಿದೆ. ಕಟ್ಟಡಗಳ ನಿಯಂತ್ರಣ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ 'ಎ' ಮತ್ತು 'ಬಿ' ಖಾತಾ ನೀಡುವ ಬಗ್ಗೆ, ಕೆ.ಟಿ.ಸಿ.ಪಿ. ಕಾಯ್ದೆ, 1961ರ ಸೆಕ್ಷನ್ 17 ರಡಿ ಅನುಮೋದನೆ ಪಡೆಯದೆ ಮೇಲೆ ತಿಳಿಸಿರುವ ಸುತ್ತೋಲೆಗಳ ಆಧಾರದ ಮೇಲೆ ದಿನಾಂಕ: 30.09.2024 ರವರೆಗೆ ನೀಡಲಾಗಿರುವ 'ಎ' ಮತ್ತು 'ಬಿ' ಖಾತಾ ಪ್ರಸ್ತಾವನೆ ಬಗ್ಗೆ, ಸಮಿತಿಯ ಶಿಫಾರಸ್ಸು ಹಾಗೂ ಮುಖ್ಯ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಅವಲೋಕಿಸಿದೆ.

ಮುಖ್ಯ ಆಯುಕ್ತರು, ಬಿಬಿಎಂಪಿರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಾನೂನುಬಾಹಿರ ಅನಿಯಂತ್ರಿತ ಕಟ್ಟಡ ನಿರ್ಮಾಣ ಮತ್ತು ಬಡಾವಣೆಗಳನ್ನು ನಿರ್ಮಿಸುವ ಬಗ್ಗೆ ಶಿಸ್ತನ್ನು ತರಲು ಮತ್ತು ಬೆಂಗಳೂರು ನಗರದ ನಾಗರಿಕರಿಗೆ ಆಗುತ್ತಿರುವ ಕೊನೆಯಿಲ್ಲದ ಅವ್ಯವಸ್ಥಿತ ಹಾಗೂ ಉಸಿರುಗಟ್ಟಿಸುವಂತಹ ತೊಂದರೆಯನ್ನು ನಿವಾರಿಸುವುದು ಈ ಪ್ರಸ್ತಾವನೆಯ ಧ್ಯೇಯವಾಗಿರುತ್ತದೆ. ಆದ್ದರಿಂದ, ಇದು ಸಾರ್ವಜನಿಕ ಹಿತದೃಷ್ಟಿ ಮತ್ತು ಶಾಸನಬದ್ಧ ನಿಬಂಧನೆಗಳನ್ನು ಪಾಲಿಸುವುದಾಗಿರುವುದರಿಂದ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 200 ಎಂಎನ್‌ಯು 2025,</u>
<u>ಬೆಂಗಳೂರು, ದಿನಾಂಕ: 25-07-2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

(1) ಬಿ.ಬಿ.ಎಂ.ಪಿ.ಗೆ ಸಂಬಂಧಿಸಿದಂತೆ **ಅನುಬಂಧ-1** ರಲ್ಲಿ ಒಳಗೊಂಡಿರುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

(2) ಎ ಮತ್ತು ಬಿ ಖಾತಾ ಎಂಬ ಪರಿಕಲ್ಪನೆ ಮೇರೆಗೆ ತಂದ ತಿದ್ದುಪಡಿ ಆಧಾರದ ಮೇಲೆ 2009 ರ ಅವಧಿಯೊಳಗೆ ನೀಡಲಾದ ಎ-ಖಾತಾ ಅಥವಾ ಸಾಮಾನ್ಯ ಖಾತಾಗಳು ಮತ್ತು ಈ ತಿದ್ದುಪಡಿಯ ಪೂರ್ವದಲ್ಲಿ, ಅನಧಿಕೃತ ಆಸ್ತಿಗಳು ಬಿ-ಖಾತಾವನ್ನು ಪಡೆಯುವ ಬಗ್ಗೆ ಯಾವುದೇ ಪರಿಕಲ್ಪನೆ ಇಲ್ಲದಿದ್ದರಿಂದ, ಸದರಿ ತಿದ್ದುಪಡಿಯ ಮುನ್ನ, ಆ ಸಮಯದಲ್ಲಿ ಜಾರಿಯಲ್ಲಿದ್ದ ಸುತ್ತೋಲೆಗಳ ಆಧಾರದ ಮೇಲೆ ನೀಡಲಾಗಿರುವ, ಎಲ್ಲಾ ಖಾತಾಗಳನ್ನು ಎಲ್ಲಾ ಕಾನೂನು ಉದ್ದೇಶಗಳಿಗೆ ಅಧಿಕೃತ ಮತ್ತು ಎ-ಖಾತಾ ಎಂದು ಪರಿಗಣಿಸಲು ಅನುಮೋದನೆ ನೀಡಿದೆ.

(ಲಕ್ಷ್ಮೀಸಾಗರ್ ...)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (...) – 1

(3) ಕೆ.ಎಂ.ಸಿ. ಕಾಯ್ದೆ, 1976 ಕ್ಕೆ 2009 ರಲ್ಲಿ ತಿದ್ದುಪಡಿ ತಂದ ನಂತರ ಆದರೆ, ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಸೆಕ್ಷನ್ 17 ರಡಿ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕೆಂಬ ತಿದ್ದುಪಡಿ ತರುವ ದಿನಾಂಕ: 22.5.2020 ರ ಪೂರ್ವದಲ್ಲಿ, ಬಿಬಿಎಂಪಿ ಆಯುಕ್ತರ ದಿನಾಂಕ: 27-01-2009, 03-02-2010, 07-02-2011, 28-09-2012, 01-07-2014 ಮತ್ತು 20-10-2014ರ ಸುತ್ತೋಲೆಗಳ ಆಧಾರದ ಮೇಲೆ ಆಸ್ತಿಗಳಿಗೆ ಎ-ಖಾತಾ ನೀಡಲಾಗಿದ್ದು, ಈ ಸುತ್ತೋಲೆಗಳ ಆಧಾರದ ಮೇಲೆ ಬಿ.ಬಿ.ಎಂ.ಪಿ.ಯು ಸ್ವತಃ ಎ-ಖಾತಾಗಳನ್ನು ನೀಡಿರುವುದರಿಂದ, ಏಕರೂಪತೆ ಮತ್ತು ಸಹಜ ನ್ಯಾಯ ತತ್ವವಾಗಿ, ಈ ಸುತ್ತೋಲೆಗಳ ಆಧಾರದ ಮೇಲೆ ನೀಡಲಾದ ಎ-ಖಾತಾಗಳನ್ನು, ಎಲ್ಲಾ ಕಾನೂನು ಉದ್ದೇಶಗಳಿಗೆ ಅಧಿಕೃತ ಎ-ಖಾತಾಗಳೆಂದು ಪರಿಗಣಿಸಲು ಅನುಮೋದನೆ ನೀಡಿದೆ.

(4) ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಸೆಕ್ಷನ್ 17 ರಡಿ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕೆಂಬ ತಿದ್ದುಪಡಿ ತಂದ ದಿನಾಂಕ: 22.5.2020ರ ನಂತರ, ಬಿಬಿಎಂಪಿ ಆಯುಕ್ತರ ದಿನಾಂಕ: 27-01-2009, 03-02-2010, 07-02-2011, 28-09-2012, 01-07-2014 ಮತ್ತು 20-10-2014ರ ಸುತ್ತೋಲೆಗಳ ಆಧಾರದ ಮೇಲೆ ನೀಡಿರುವ ಖಾತಾಗಳನ್ನು ಎಲ್ಲಾ ಕಾನೂನು ಉದ್ದೇಶಕ್ಕೆ ಅಧಿಕೃತ ಎ-ಖಾತಾ ಎಂದು ಪರಿಗಣಿಸಲು ಅನುಮೋದನೆ ನೀಡಿದೆ.

(5) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರಡಿ ರಚಿಸುವ ಎಲ್ಲಾ ಹೊಸ ಮಹಾನಗರ ಪಾಲಿಕೆಗಳಿಗೂ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಇದನ್ನು ಯಥಾವತ್ತಾಗಿ (mutatis mutandis) ಅನ್ವಯಿಸಲು ಅನುಮೋದನೆ ನೀಡಿದೆ.

ಈ ಆದೇಶವನ್ನು ದಿನಾಂಕ: 17-07-2025 ರಂದು ನಡೆದ ಸಚಿವ ಸಂಪುಟದ ಸಭೆಯ ವಿಷಯ ಸಂಖ್ಯೆ: ಸಿ: 535/2025 ರ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ

ಲಕ್ಷ್ಮೀಸಾಗರ್ ಎನ್ ಕೆ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) – 1

ಇವರಿಗೆ:

1) ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
8) ಅಧ್ಯಕ್ಷರು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು.
9) ವಿಶೇಷ ಆಯುಕ್ತರು (ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10) ವಿಶೇಷ ಆಯುಕ್ತರು (ಕಂದಾಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
11) ಮಾನ್ಯ ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12) ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಚಿವ ಸಂಪುಟ, ವಿಧಾನಸೌಧ, ಬೆಂಗಳೂರು.
(ಪ್ರಕರಣ ಸಂಖ್ಯೆ: ಸಿ: 535/2025, ದಿನಾಂಕ: 17-07-2025).
13) ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
14) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
15) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
16) ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
17) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ನಅಇ 200 ಎಂಎನ್‌ಯು 2025,
ಬೆಂಗಳೂರು, ದಿನಾಂಕ: 25-07-2025ರ ಅನುಬಂಧ-1.

Regulation of issuance of "A" and "B" Khata for properties in the BBMP

1. Buildings proposed to be constructed on the vacant sites which have been issued B-Khata by BBMP:

The following shall apply in such cases –

i. It shall be mandatory that there is a public road connecting to the vacant site. In case there is a private road connecting to such a vacant site then the same shall have to be declared as a "Public Road" as per provisions of the section 212 of the GBG Act, 2024.

ii. Thereupon, in case the property is on a land which is/was a Revenue Survey Number/Hissa Sy No but has not been converted then the land shall be converted to non-agricultural purpose under section 95 of the Karnataka Land Revenue Act 1964 (KLR Act, 1964). In this regard, as per latest amended section 95, in case the land falls within the approved Revised Master Plan of Bengaluru City then the permission of the Deputy Commissioner shall not be required for diversion of land to such non-agriculture purpose as prescribed in the approved Master Plan. The Fee prescribed under section 95(7) KLR Act shall be paid to the authority according approval under section 17 of the KTCP Act 1961.

iii. There upon, with conversion, newly approved or already existing, of such a vacant plot shall obtain relevant approval under section 17 of the KTCP Act 1961 either as a "Single Plot" or a layout.

iv. There upon such a vacant site may be issued A-Khata by the BBMP as per the GBG Act, 2024.

v. Once the relevant approval under section 17 of the KTCP Act 1961 has been obtained and A-Khata has been issued then it shall obtain relevant approval under section 15 of the KTCP Act 1961 from the BBMP for the building plan and after construction obtain the Occupancy Certificate.

vi. As the vacant site with existing B-Khata can comply with above steps and apply & obtain a Building Plan approval under section 15 of the KTCP Act, and relevant sections of the GBG Act it shall be

ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) - 1

mandatory to do so and buildings in violation of the KTCP Act 1961 shall not be constructed.

2. Buildings already constructed on unauthorized layout/land/sites either without any Khata or having B-Khata from the BBMP but other than Multi-Unit Flats/Units on a Single Plot.

This is in context of individual plot with a building which has been unauthorizedly constructed or is in violation of the KTCP Act or the BBMP Act 2020 or the GBG Act 2024. This shall not be applicable to Multi-Storey Flats or Units where multiple-units are constructed on a single plot. The section 144(6) of the BBMP Act, 2020 and corresponding section of the GBG Act, 2024 provides for giving B-Khata to unauthorized buildings. The following action shall be taken in these cases –

i. It shall be mandatory that there is a public road connecting to the plot with the building. In case there is a private road connecting to such a property then the same shall have to be declared as a "Public Road" as per provisions of section 212 of the Greater Bengaluru Governance Act 2024.

ii. Thereupon, in case the property is on a land which is/was a Revenue Survey Number/Hissa Sy No but has not been converted then the land shall be converted to non-agricultural purpose under Section 95 of the Karnataka Land Revenue Act 1964. In this regard as per latest amended Section 95, in case the land falls within the approved Revised Master Plan of Bengaluru City then the permission of the Deputy Commissioner shall not be required for diversion of land to such non-agriculture purpose as prescribed in the approved Master Plan. The Fee prescribed under Section 95(7) KLR Act shall be paid to the authority according approval under Section 17 of the KTCP Act 1961.

iii. Thereupon, with conversion, either newly approved or already existing, of such a plot on which the building is standing, the plot shall obtain relevant approval under Section 17 of the KTCP Act 1961 either as a "Single Plot" or a layout. The plot or land so approved under Section 17 of the KTCP Act 1961 may be issued A-Khata for the plot/land.

ಲಕ್ಷ್ಮಿ ಸಾಗರ್ [illegible]
ಸರ್ಕಾರದ ಅಧೀನ ಕಾರ್ಯದರ್ಶಿ
[illegible]

iv. Once the relevant approval under Section 17 of the KTCP Act 1961 has been obtained then it shall obtain relevant approval under Section 15 of the KTCP Act 1961 and corresponding sections in the GBG Act from the BBMP for the building.

v. In case the existing building is eligible to be accorded the approval under Section 15 of the KTCP Act 1961 and corresponding sections in the GBG Act and gets the same including the Occupancy Certificate then the full Property – both the plot and the building – may be issued A-Khata by the BBMP.

vi. In case the existing building is in violation of and not brought in conformity with the Zoning Regulations and Master Plan then it will not be eligible to be accorded the approval under Section 15 of the KTCP Act 1961 and corresponding sections in the GBG Act. The same shall be recorded as "Building in violation of the Zonal Regulations & KTCP Act" in the Plot's A-Khata in relevant Encumbrance/Remarks Column of the A-Khata.

3. Multi-Unit Flats/Units constructed unauthorizedly or in violation of the KTCP Act 1961 or the BBMP Act 2020 or the GBG Act 2024 on a Single Plot on or before 30.09.2024& which do not have BBMP Khata.

The unauthorized constructions shall not be issued B-Khata except as provided below:-

The multi-unit Flats/Units already constructed unauthorizedly & without requisite approvals under the KTCP Act as on 30.09.2024 on a Single Plot and which do not have any BBMP Khata, may be issued BBMP Khata as follows –

i. It shall be mandatory that there is a public road connecting to the plot with the multi-unit flats/units. In case there is a private road connecting to such a property then the same shall have to be declared as a "Public Road" as per provisions of section 226 of the BBMP Act 2020 or under section 212 of the GBG Act, 2024.

ii. In case of such of the Flats/Units in the multi-unit Flats/Units which are still with the Developer or Owner of the Single Plot (on which they are constructed) –

ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ ([illegible]) - 1

a) If the said Single Plot is/was a Revenue Survey Number/Hissa Sy No or part thereof but has not been converted then the land shall be converted to non-agricultural purpose under Section 95 of the Karnataka Land Revenue Act 1964. In this regard as per latest amended Section 95, in case the land falls within the approved Revised Master Plan of Bengaluru City then the permission of the Deputy Commissioner shall not be required for diversion of land to such non-agriculture purpose as prescribed in the approved Master Plan. The Fee prescribed under Section 95(7) KLR Act shall be paid to the authority according approval under Section 17 of the KTCP Act 1961.

b) Thereupon, with conversion, either as newly approved or as already existing, of such a Single Plot on which the multi-unit flats/units are standing, the owner/developer shall obtain relevant approval under Section 17 of the KTCP Act 1961 as a "Single Plot" or a "layout".

c) Once the relevant approval under Section 17 of the KTCP Act 1961 has been obtained then it shall obtain relevant approval under Section 15 of the KTCP Act 1961 from the BBMP for the construction and also obtain the Occupancy Certificate.

d) In case the existing Building containing the Multi-Unit Flats/Units, is eligible to be accorded the approval under Section 15 of the KTCP Act 1961 and gets the Occupancy Certificate then the each Flat/Unit therein may be issued A-Khata by the BBMP as per GBG Act, 2024.

e) In case the existing Multi-Unit building is not eligible to be accorded the approval under Section 15 of the KTCP Act 1961 or the Owner/Developer fails to obtain above approvals then the each Flat/Unit therein may be issued B-Khata by the BBMP as per GBG Act, 2024 in case it is proved that the building and concerned Unit/Flat was constructed on or before 30.09.2024 as proved by provision of regular/permanent electricity connection by BESCOM not later than the said date.

iii. In case a registered transaction has happened for a multi-unit flat/unit on or before 30.09.2024 by the developer or builder or owner of the

ಲಕ್ಷ್ಮಿ ಸಾಗರ್ [illegible]
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) - 1

multi-storey Flat/Unit then the person having the registered deed in his favor may himself apply and obtain B-Khata.

Provided that one or more of these individual persons who have a registered deed in their favor for one or more of the Flats/Units may comply with the requirements given in paragraph (ii) points number (a) to (c) above for the whole construction and all the flats/units therein. Thereupon they may also apply for building plan approval under Section 15 of the KTCP Act 1961 and relevant provisions of the GBG Act 2024. In case they successfully obtain the said Building Plan approval for the full construction and also obtain an Occupancy Certificate, then each Flat/Unit becomes eligible for A-Khata.

iv. The B-Khata is as per provision contained in Section 144(6) of the BBMP Act and parallel section in the GBG Act 2024. It is reiterated that as per proviso contained in these provisions such a B-Khata does not confer any right to regularize violations made or title, ownership or legal status to such buildings. Such buildings shall always be liable for any action for violation of law in accordance with the GBG Act 2024 or any other law.

v. The existence of a regular BESCOM electricity connection for such a property on or before 30.09.2024 shall be mandatory to prove that construction was done by 30.09.2024.

In case of any Single Plot with Multi-Units constructed after 30.09.2024, the same shall not be issued B-Khata and may obtain A-Khata as per KTCP Act 1961 and the GBG Act 2024.

4. BBMP Khata for vacant land duly converted under section 95 of the Karnataka Land Revenue Act, 1964, which has not been further sub-divided after the conversion but has not obtained relevant approvals under the KTCP Act 1961.

In all such cases the owner shall obtain relevant approvals under the KTCP Act, 1961, and thereupon may be issued A-Khata from BBMP. No B-Khata shall be issued for such a vacant land as the person has opportunity to obtain A-Khata after duly complying with the provisions of the KTCP Act 1961 and the GBG Act.

ಲಕ್ಷ್ಮಿ ಸಾಗರ್ [illegible]
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ ([illegible])

5. BBMP Khata for unauthorizedly sub-divided part of a vacant land duly converted under section 95 of the Karnataka Land Revenue Act, 1964, which has already been transacted through a registered deed but without relevant approvals under the KTCP Act 1961.

Only in such cases of sub-division where the sub-divided vacant plot has been transacted through a registered deed on or before 30.09.2024, BBMP Khata may be issued as follows –

a) Firstly, the road connecting to such a vacant plot or land shall have to be declared as a "Public Road" as per provisions of Section 212 of the GBG Act, 2024 unless a "public road" already exists which connects to the said vacant plot.

b) Thereupon, such a vacant site shall obtain relevant approval under Section 17 of the KTCP Act 1961 either as a "Single Plot" or a layout.

c) Thereupon such a sub-divided vacant site may be issued A-Khata by the BBMP as per the GBG Act, 2024.

d) No B-Khata shall be issued for such a vacant land as the person has opportunity to obtain A-Khata after duly complying with the provisions of the KTCP Act 1961 and the GBG Act 2024.

6. BBMP Khata for an undivided vacant land bearing a Revenue Survey Number/Hissa Sy No which has not been converted under section 95 of the KLR Act 1964 –

Every undivided land bearing a Revenue Survey Number or a Hissa Survey Number under the Karnataka Land Revenue Act, 1964, which has not been converted is an agricultural land and cannot be issued BBMP Khata.

The BBMP Khata may be issued after complying with the following:

i. It shall be ensured that there is a public road connecting to the vacant plot. In case there is a private road connecting to such a vacant plot or land then the same shall have to be declared as a "Public Road" as per provisions of Section 212 of the GBG Act, 2024.

ii. The land shall be converted to non-agricultural purpose under Section 95 of the Karnataka Land Revenue Act 1964. In this regard as per latest amended Section 95, in case the land falls within the approved Revised Master Plan of Bengaluru City then the permission of the Deputy Commissioner shall not be required for diversion of land to such non-agriculture purpose as prescribed in the approved Master Plan. The Fee prescribed under Section 95(7) KLR Act shall be paid to the authority according approval under Section 17 of the KTCP Act 1961.

iii. Thereupon, such a vacant site shall obtain relevant approval under Section 17 of the KTCP Act 1961 either as a "Single Plot" or a layout.

iv. Thereupon such a Revenue vacant site may be issued A-Khata by the BBMP as per the GBG Act 2024.

v. No B-Khata shall be issued for such a vacant land as the person has opportunity to obtain A-Khata after duly complying with the provisions of the KLR Act 1964, KTCP Act 1961 and the GBG Act.

7. BBMP Khata for unauthorizedly sub-divided part of a vacant land bearing a Revenue Survey Number or Hissa Survey Number which is not converted under section 95 of the Karnataka Land Revenue Act, 1964, but which has already been transacted through a registered deed on or before 30.09.2024.

Only in such cases of sub-division of a vacant land bearing a Revenue Sy No/Hissa Sy No where the sub-divided vacant plot has been transacted through a registered deed on or before 30.09.2024, the BBMP Khata may be issued after complying with the following –

i. It shall be ensured that there is a public road connecting to such a sub-divided vacant plot. In case there is a private road connecting to such a vacant plot or land then the same shall have to be declared as a "Public Road" as per provisions of the Section 212 of the GBG Act 2024.

[illegible]
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಪ...)

ii. The land shall be converted to non-agricultural purpose under Section 95 of the Karnataka Land Revenue Act 1964. In this regard as per latest amended Section 95, in case the plot falls within the approved Revised Master Plan of Bengaluru City then the permission of the Deputy Commissioner shall not be required for diversion of land to such non-agriculture purpose as prescribed in the approved Master Plan. The Fee prescribed under Section 95(7) KLR Act shall be paid to the authority according approval under section 17 of the KTCP Act 1961.

iii. Thereupon, such a sub-divided vacant site shall obtain relevant approval under Section 17 of the KTCP Act 1961 either as a "Single Plot" or a layout.

iv. Thereupon such a sub-divided revenue vacant site may be issued A-Khata by the BBMP as per the GBG Act 2024.

v. No B-Khata shall be issued for such a sub-divided vacant land as the person has the opportunity to obtain A-Khata after duly complying with the provisions of the KLR Act 1964, KTCP Act 1961 and the BBMP Act 2020.

(LAKSHMI SAGARA N.K)
Under Secretary to Government,
Urban Development Department (BBMP-1)

ಲಕ್ಷ್ಮೀಸಾಗರ್ ಎನ್ ಕೆ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) - 1

ಅನುಬಂಧ-2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಚೇರಿ, ಕೇಂದ್ರ ಕಚೇರಿ, ಅನೆಕ್ಸ್-1 ಕಟ್ಟಡ,
1ನೇ ಮಹಡಿ, ಎನ್.ಆರ್. ಸ್ಕ್ವೇರ್, ಬೆಂಗಳೂರು - 560002

ಸಂಖ್ಯೆ: ಮು.ಆ/ಪಿ.ಎಸ್.ಆರ್(ಟ)1384A/2025-26 1384A   ದಿನಾಂಕ: 01/9/25

: ಸುತ್ತೋಲೆ :

ವಿಷಯ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ "ಏಕ ನಿವೇಶನ" ಮಂಜೂರಾತಿ ಮತ್ತು ಎ-ಖಾತಾ/ಬಿ-ಖಾತಾ ವಿತರಣೆಯ ಅನುಮೋದನೆ ಪ್ರಕ್ರಿಯ ಕುರಿತು.

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ ನಅಇ 790 ಎಂ.ಎಸ್.ಯು 2024 ದಿನಾಂಕ 07.04.2025.
2. ಸರ್ಕಾರದ ಆದೇಶ ಸಂಖ್ಯೆ ನಅಇ 272 ಎಂ.ಎನ್.ಜೆ 2025 (ಇ) ದಿನಾಂಕ 16-07-2025.
3. ಸರ್ಕಾರದ ಆದೇಶ ಸಂಖ್ಯೆ ನಅಇ 200 ಎಂ.ಎಸ್.ಯು 2025 ದಿನಾಂಕ 25.07.2025.

--*-*-*-*

ಸರ್ಕಾರದ ಆದೇಶ ಸಂಖ್ಯೆ ನಅಇ 272 ಎಂಎನ್‌ಜೆ 2025 (ಇ) ದಿನಾಂಕ 16-07-2025 ರನ್ವಯ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ (KTCP ಕಾಯ್ದೆ 1961) ಪ್ರಕರಣ 17 ರ ಅಡಿಯಲ್ಲಿ "ಏಕ ನಿವೇಶನ" ಮಂಜೂರಾತಿಯನ್ನು ನೀಡಲು ದಿನಾಂಕ 07.04.2025 ರ ಅಧಿಸೂಚನೆ ಸಂಖ್ಯೆ ನಅಇ 790 ಎಂಎಸ್‌ಯು 2024 ರಲ್ಲಿನ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ಬಿಬಿಎಂಪಿಯು "ಏಕ ನಿವೇಶನ" ಅನುಮೋದನೆಯನ್ವಯ ಎ-ಖಾತಾಗೆ ಅರ್ಹವಾಗುತ್ತದೆ. ದಿನಾಂಕ 16-07-2025 ರ ಅಧಿಸೂಚನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಮುಂದುವರೆದು, ಬಿಬಿಎಂಪಿಯು ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿನ ಆಸ್ತಿಗಳು ಮತ್ತು ಖಾಲಿ ನಿವೇಶನ / ಭೂಮಿಗಳಿಗೆ "ಎ-ಖಾತಾ" ಮತ್ತು "ಬಿ-ಖಾತಾ" ಗಳನ್ನು ಅನುಮೋದಿಸಿ, ವಿತರಿಸಲು ದಿನಾಂಕ 25.07.2025 ರ ಸರ್ಕಾರಿ ಆದೇಶ ಸಂಖ್ಯೆ ನಅಇ 200 ಎಂಎಸ್‌ಯು 2025 ರ ಪ್ರಕಾರ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಸರ್ಕಾರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ದಿನಾಂಕ: 16.07.2025 ರ ಅಧಿಸೂಚನೆಯ ಪ್ರಕಾರ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17 ರ ಅಡಿಯಲ್ಲಿ ವಿವಿಧ ವಿಸ್ತೀರ್ಣಗಳಿಗೆ "ಏಕ ನಿವೇಶನ" ಮಂಜೂರಾತಿ ಈ ಕೆಳಕಂಡಂತಿದೆ.

(i) **2000 ಚದರ ಮೀಟರ್ ವರೆಗೆ:** ದಿನಾಂಕ: 16.07.2025 ರ ಅಧಿಸೂಚನೆಯ ಪ್ರಕಾರ, ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17 ರ ಅಡಿಯಲ್ಲಿ 2000 ಚದರ ಮೀಟರ್‌ಗಳವರೆಗಿನ ನಿವೇಶನಕ್ಕೆ ಬಿಬಿಎಂಪಿಯು "ಏಕ ನಿವೇಶನ" ದ ಮಂಜೂರಾತಿಯನ್ನು "ಏಕ ನಿವೇಶನ" ಇರುವ ಸ್ಥಳದಲ್ಲಿಯೇ ಪರಿವರ್ತಿತ ಅಭಿವೃದ್ಧಿಯಾಗದ ಭೂಮಿಯನ್ನು, ಯಾವ ಉದ್ದೇಶಕ್ಕಾಗಿ ಪ್ರಸ್ತಾಪಿಸಲಾಗಿತ್ತು ಅದೇ ಉದ್ದೇಶದ ಏಕ ನಿವೇಶನದ ಬಳಕೆಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಪ್ರಕರಣ 45(B) ಅಡಿಯಲ್ಲಿ ಘೋಷಿಸಲಾದ ಮಾರ್ಗಸೂಚಿ ಮೌಲ್ಯದ ದರದ ಶೇ.5% ಶುಲ್ಕವನ್ನು ಪಾವತಿಸಿಕೊಂಡು ಮಂಜೂರಾತಿ ನೀಡುವುದು". ಈ

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶುಲ್ಕವನ್ನು 55 ಚದರ ಮೀಟರ್‌ವರೆಗಿನ ವಿಸ್ತೀರ್ಣ ಹೊಂದಿರುವ ಏಕ ನಿವೇಶನ ಸಂದರ್ಭದಲ್ಲಿ ಸಂಗ್ರಹಿಸಲಾಗುವುದಿಲ್ಲ.

(ii) **<u>2000 ಚದರ ಮೀಟರ್ ಗಿಂತ ಮೇಲ್ಪಟ್ಟು 4000 ಚದರ ಮೀಟರ್‌ಗಳ ವರೆಗೆ:</u>** 2000 ಚದರ ಮೀಟರ್ ಗಿಂತ ಮೇಲ್ಪಟ್ಟು 4000 ಚದರ ಮೀಟರ್ ವರೆಗಿನ "ಏಕ ನಿವೇಶನ" ಅನ್ನು ದಿನಾಂಕ: 16.07.2025 ರ ಅಧಿಸೂಚನೆಯ ಪ್ರಕಾರ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17 ರ ಅಡಿಯಲ್ಲಿ ಬಿಬಿಎಂಪಿಯು ಮಂಜೂರಾತಿ ಮಾಡಲಾಗುತ್ತದೆ ; ಮತ್ತು ಅದು;

a. "ಏಕ ನಿವೇಶನ" ಇರುವ ಸ್ಥಳದಲ್ಲಿಯೇ ಪರಿವರ್ತಿತ ಅಭಿವೃದ್ಧಿಯಾಗದ ಭೂಮಿಗೆ ಯಾವ ಉದ್ದೇಶಕ್ಕಾಗಿ ಪ್ರಸ್ತಾಪಿಸಲಾಗಿತ್ತು ಅದೇ ಉದ್ದೇಶದ ಬಳಕೆಗೆ ಮುಂದುವರಿಸಲು, ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಪ್ರಕರಣ 45(B) ಅಡಿಯಲ್ಲಿ ಘೋಷಿಸಲಾದ ಮಾರ್ಗಸೂಚಿ ಮೌಲ್ಯದ ದರದ ಶೇ.10% ರಷ್ಟು ಶುಲ್ಕವನ್ನು ಪಾವತಿಸಬೇಕು", ಅಥವಾ,

b. "ನಿವೇಶನ ವಾಸಯೋಗ್ಯ ಅಥವಾ ವಸತಿಯೇತರ ಅಥವಾ ಮಿಶ್ರ-ಬಳಕೆಯ ಉದ್ದೇಶಗಳ ಬಳಕೆಯ ಹೊರತಾಗಿಯೂ ಏಕ ನಿವೇಶನ ಪ್ರದೇಶದ ಕನಿಷ್ಠ ಶೇ.10%ರಷ್ಟು ವಿಸ್ತೀರ್ಣದ ನಿರಂತರ ಭೂಮಿಯ ಒಂದು ಭಾಗವನ್ನು ಉದ್ಯಾನವನಕ್ಕಾಗಿ ಕಾಯ್ದಿರಿಸಬೇಕು ಮತ್ತು ನೋಂದಾಯಿತ ಪರಿತ್ಯಾಜನ ಪತ್ರದ ಮೂಲಕ ಪ್ರಾಧಿಕಾರಕ್ಕೆ ಉಚಿತವಾಗಿ ಹಸ್ತಾಂತರಿಸಬೇಕು "

(iii) **<u>4000 ಚದರ ಮೀಟರ್‌ಗಳಿಗಿಂತ ಮೇಲ್ಪಟ್ಟು 10000 ಚದರ ಮೀಟರ್‌ಗಳ ವರೆಗೆ:</u>** ದಿನಾಂಕ: 16.07.2025 ರ ಅಧಿಸೂಚನೆಯ ಪ್ರಕಾರ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17 ರ ಅಡಿಯಲ್ಲಿ 4000 ಚದರ ಮೀಟರ್ ಗಿಂತ ಮೇಲ್ಪಟ್ಟು 10,000 ಚದರ ಮೀಟರ್ ವರೆಗಿನ ನಿವೇಶನಗಳಿಗೆ ಬಿಬಿಎಂಪಿಯು "ಏಕ ನಿವೇಶನ" ವನ್ನು ಮಂಜೂರಾತಿ ಮಾಡಲಾಗುತ್ತದೆ ಮತ್ತು ದಿನಾಂಕ:16-07-2025ರ ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿರುವಂತೆ ಉದ್ಯಾನವನಗಳು ಮತ್ತು ವಾಹನ ನಿಲುಗಡೆ ಪ್ರದೇಶಕ್ಕಾಗಿ ವಿಸ್ತೀರ್ಣವನ್ನು ಉಚಿತವಾಗಿ ಪರಿತ್ಯಾಜ್ಯನ ಮಾಡಬೇಕಾಗಿರುತ್ತದೆ.

(iv) **<u>10,000 ಚದರ ಮೀಟರ್‌ಗಳಿಗೂ ಮೇಲ್ಪಟ್ಟು :</u>** ಬೆಂಗಳೂರಿನ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಾಸ್ಟರ್ ಪ್ಲಾನ್, ವಲಯ ನಿಯಮಾವಳಿಗಳು 2025 ಅಧ್ಯಾಯ 6 ರ ಅಡಿಯಲ್ಲಿ ದಿನಾಂಕ : 16.07.2025 ರ ಅಧಿಸೂಚನೆಯ ಪ್ರಕಾರ, 1961 ರ ಕೆಟಿಸಿಪಿ ಕಾಯ್ದೆಯ ಪ್ರಕರಣ 17 ರ ಅಡಿಯಲ್ಲಿ ಸಂಬಂಧಿತ ಯೋಜನಾ ಪ್ರಾಧಿಕಾರವು 10000 ಚದರ ಮೀಟರ್‌ಗಿಂತ ಮೇಲ್ಪಟ್ಟ ವಿಸ್ತೀರ್ಣಕ್ಕೆ "ಏಕ ನಿವೇಶನ" ವನ್ನು ಮಂಜೂರಾತಿ ಮಾಡಲಾಗುತ್ತದೆ.

ಈ ಆದೇಶವನ್ನು ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿ ಕಾರ್ಯಗತಗೊಳಿಸಲು, ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಪ್ರಕರಣ 45(B) ಅಡಿಯಲ್ಲಿ ಅಧಿಸೂಚಿಸಲಾದ ಅನ್ವಯವಾಗುವ ಮಾರ್ಗಸೂಚಿ ಮೌಲ್ಯವು ಈ ಕೆಳಕಂಡಂತಿರುತ್ತದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ. ಸಂ	ವಿಸ್ತೀರ್ಣ	ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಪ್ರಕರಣ 45(B) ರಂತೆ ದರಗಳು
1.	5 ಗುಂಟೆಗಳವರೆಗೆ (5445 ಚದರ ಅಡಿಗಳು ಅಥವಾ 505.85 ಚದರ ಮೀಟರ್‌ಗಳು	ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
2.	5 ಗುಂಟೆಗಳಿಗೂ ಮೇಲ್ಪಟ್ಟು (5445 ಚದರ ಅಡಿಗಳು ಅಥವಾ 505.85 ಚದರ ಮೀಟರ್‌ಗಳು 7.50 ಗುಂಟೆಗಳವರೆಗೆ (8167.5 ಚದರ ಅಡಿಗಳು ಅಥವಾ 758.78 ಚದರ ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.70ರಷ್ಟು, ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
3.	7.50 ಗುಂಟೆಗಳಿಗೂ ಮೇಲ್ಪಟ್ಟು (8167.5 ಚದರ ಅಡಿಗಳು ಅಥವಾ 758.78 ಚದರ ಮೀಟರ್) 10 ಗುಂಟೆಗಳವರೆಗೆ (10890 ಚದರ ಅಡಿಗಳು ಅಥವಾ 1011.7 ಚದರ ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನದ ದರದ ಶೇ.65ರಷ್ಟು, ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
4.	10 ಗುಂಟೆಗಳಿಗೂ ಮೇಲ್ಪಟ್ಟು (10890 ಚದರ ಅಡಿಗಳು ಅಥವಾ 1011.7 ಚದರ ಮೀಟರ್‌ಗಳು) 20 ಗುಂಟೆಗಳವರೆಗೆ (21780 ಚದರ ಅಡಿಗಳು ಅಥವಾ 2023.4 ಚದರ ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನದ ದರದ ಶೇ.60 ರಷ್ಟು, ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
5.	20 ಗುಂಟೆಗಳಿಗೂ ಮೇಲ್ಪಟ್ಟು (21780 ಚದರ ಅಡಿಗಳು ಅಥವಾ 2023.4 ಚದರ ಮೀಟರ್‌ಗಳು) 40 ಗುಂಟೆಗಳವರೆಗೆ (43560 ಚದರ ಅಡಿಗಳು ಅಥವಾ 4046.86 ಚದರ ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನದ ದರದ ಶೇ.55 ರಷ್ಟು, ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
6.	1 ಎಕರೆಗೂ ಮೇಲ್ಪಟ್ಟು (43560 ಚದರ ಅಡಿಗಳು ಅಥವಾ 4046.86 ಚದರ ಮೀಟರ್‌ಗಳು)	(i) ಕೈಗಾರಿಕಾ ಉಪಯೋಗ = ಕೃಷಿ ಭೂಮಿಯ ದರ + ಶೇ.55ರಷ್ಟು ಕೃಷಿ ಭೂಮಿಯ ದರ (ii) ವಾಸದ ಉಪಯೋಗ = ಕೃಷಿ ಭೂಮಿಯ ದರ + ಶೇ.65ರಷ್ಟು ಕೃಷಿ ಭೂಮಿಯ ದರ (iii) ವಾಣಿಜ್ಯ = ಕೃಷಿ ಭೂಮಿಯ ದರ + ಶೇ.80ರಷ್ಟು ಕೃಷಿ ಭೂಮಿಯ ದರ

ಈ ಸುತ್ತೋಲೆಯು ದಿನಾಂಕ:16.07.2025 ರ ಅಧಿಸೂಚನೆಯಲ್ಲಿ ವ್ಯಾಖ್ಯಾನಿಸಲಾದ "ಏಕ ನಿವೇಶನಳಿಗೆ" ಅಂದರೆ "ಖಾಲಿ ನಿವೇಶನಗಳು" ಅಥವಾ "ಕಟ್ಟಡ ಹೊಂದಿರುವ ನಿವೇಶನಗಳಿಗೆ" ಅನ್ವಯಿಸುತ್ತದೆ, ಆದರೆ "ಬಹುಮಹಡಿ ಫ್ಲಾಟ್‌ಗಳು / ಘಟಕಗಳಿಗೆ" ಅನ್ವಯಿಸುವುದಿಲ್ಲ, ಮಾಲೀಕತ್ವವು ಮೂಲಭೂತವಾಗಿ ಫ್ಲಾಟ್‌ಗಳು ಅಥವಾ ಕಟ್ಟಡಗಳು ಅಥವಾ ಅದರ ಭಾಗವಾಗಿರುವ ಮತ್ತು "ಏಕ ನಿವೇಶನ" ಅಲ್ಲದ ಘಟಕಗಳಾಗಿರುತ್ತದೆ.

ಬಿಬಿಎಂಪಿಯಿಂದ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17 ರ ಅಡಿಯಲ್ಲಿ "ಏಕ ನಿವೇಶನಗಳಿಗೆ" ಅನುಮೋದನೆಯನ್ನು ಪಾರದರ್ಶಕವಾಗಿ ಮತ್ತು ಆನ್‌ಲೈನ್‌ನಲ್ಲಿ ತೊಂದರೆ-ಮುಕ್ತವಾಗಿ ನೀಡಲು, ಈ ಕೆಳಗಿನ ಕಾರ್ಯವಿಧಾನವನ್ನು ಅನುಸರಿಸಬೇಕಾಗಿರುತ್ತದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

1. 2,000 ಚದರ ಮೀಟರ್ ಗಳ ವಿಸ್ತೀರ್ಣದವರೆಗಿನ "ಏಕ ನಿವೇಶನ"

(i) ಈಗಾಗಲೇ ನಮೂನೆ ಬಿ ಇ-ಖಾತೆ ಹೊಂದಿರುವ ಸ್ವತ್ತುಗಳಿನ ಅರ್ಜಿದಾರರು ಬೆಂಗಳೂರು ನಗರ ಪಾಲಿಕೆಯಿಂದ ಅಂತಿಮ ಇ-ಖಾತೆಯನ್ನು ಪಡೆಯಬಹುದು.

(ii) ಅರ್ಜಿದಾರರು ಅಂತಿಮ ಇ-ಖಾತೆಯ ಇ-ಪಿಐಡಿಯನ್ನು ನಮೂದಿಸಿ ಆನ್‌ಲೈನ್ "ಏಕ ನಿವೇಶನ" ಅನುಮೋದನೆ ವ್ಯವಸ್ಥೆಯಲ್ಲಿ ಸ್ವತ್ತಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

(iii) ಅರ್ಜಿಯ ಭರ್ತಿಯನ್ನು ಪ್ರಾರಂಭಿಸಲು ಕನಿಷ್ಠ ಒಬ್ಬ ಮಾಲೀಕರಿಂದ ಆಧಾರ್ ಇ-ಕೆವೈಸಿ ಆಧಾರಿತ ದೃಢೀಕರಣದ ಅವಶ್ಯಕತೆ ಇರುತ್ತದೆ. ಒಂದು ವೇಳೆ ಮಾಲೀಕರು ಆಧಾರ್ ಸಂಖ್ಯೆಯನ್ನು ಹೊಂದಿಲ್ಲದೇ ಇದ್ದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮಾಲೀಕರ ಡಿಜಿಟಲ್ ಸಹಿ ಪ್ರಮಾಣಪತ್ರಗಳನ್ನು ಬಳಸಬೇಕಾಗಿರುತ್ತದೆ.

(iv) ನಮೂದಿಸಲಾದ ಆಧಾರ್ ಅನ್ನು ಇ-ಖಾತಾ ವ್ಯವಸ್ಥೆಯಲ್ಲಿನ ಮಾಲೀಕರ ಆಧಾರ್‌ನೊಂದಿಗೆ ತಾಳೆ ಮಾಡಿ ಮತ್ತು ತಾಳೆ ಆದಲ್ಲಿ, ಅರ್ಜಿದಾರರು ಮುಂದುವರಿಯಬಹುದು.

(v) ಸದರಿ ಸ್ವತ್ತಿನ ಇ-ಖಾತಾಯಲ್ಲಿ ಆಧಾರ್ ವಿವರಗಳು ಲಭ್ಯವಿಲ್ಲದೇ ಇದ್ದಲ್ಲಿ ಅಥವಾ ಮಾಲೀಕರು ಆಧಾರ್ ಸಂಖ್ಯೆಯನ್ನು ಹೊಂದಿಲ್ಲದೇ ಇದ್ದಲ್ಲಿ ಅವರು ಸ್ವತಃ ದೃಢೀಕರಿಸಲು ಡಿಜಿಟಲ್ ಸಹಿ ಪ್ರಮಾಣಪತ್ರಗಳನ್ನು (DSC) ಬಳಸಬಹುದು. ಸದರಿ ಡಿಎಸ್‌ಸಿ ವಿವರಗಳನ್ನು ಮಾಲೀಕರ ಹೆಸರು ಮತ್ತು ವಿವರಗಳೊಂದಿಗೆ ಸಹಾಯಕ ಕಂದಾಯ ಅಧಿಕಾರಿ ಶ್ರೇಣಿಯ ಅಧಿಕಾರಿಯು ತಾಳೆ ಮಾಡಿ ಧೃಢೀಕರಿಸಬೇಕಾಗಿರುತ್ತದೆ.

(vi) ಅರ್ಜಿದಾರರು ಅಂತಿಮ ಇ-ಖಾತಾವನ್ನು ಪಡೆಯುವ ಸಮಯದಲ್ಲಿ ಅವರು ನೀಡಿದ ಜಿಪಿಎಸ್ ಪ್ರಕಾರ ಗೂಗಲ್ ಅರ್ಥ್ ಮತ್ತು ಇತರ ಸೂಕ್ತ ನಕ್ಷೆಗಳಲ್ಲಿ ಆಸ್ತಿಯ ಸ್ಥಳವನ್ನು ತೋರಿಸಲಾಗುವುದು. ಅವರು ಆಸ್ತಿಯ ಸ್ಥಳವನ್ನು ದೃಢೀಕರಿಸಬಹುದು ಅಥವಾ ನೈಜ ಮತ್ತು ನಿಖರವಾದ ಸ್ಥಳವನ್ನು ಗುರುತಿಸಿ ಅದನ್ನು ಬದಲಾಯಿಸಬಹುದು. ನಗರ ಪಾಲಿಕೆಯ ಪರಿಶೀಲನಾ ತಂಡವು ಗುರುತಿಸಿದ ಸ್ಥಳದ ಪರಿಶೀಲನೆ ಮಾಡಲಾಗುವುದು ಒಂದು ವೇಳೆ ತಪ್ಪಾದ ಸ್ಥಳವನ್ನು ಗುರುತಿಸಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

(vii) ಅರ್ಜಿದಾರರು ತಮ್ಮ ಆಸ್ತಿಯ ಮುಂದೆ ಇರುವ ರಸ್ತೆಯು "ಸಾರ್ವಜನಿಕ ರಸ್ತೆ" ಅಥವಾ "ಖಾಸಗಿ ರಸ್ತೆ" ಯೇ ಎಂಬುದನ್ನು ಘೋಷಿಸಬೇಕು.

(viii) ಒಂದು ವೇಳೆ ಸಾರ್ವಜನಿಕ ರಸ್ತೆಯಾಗಿದ್ದಲ್ಲಿ ಸಂಬಂಧಪಟ್ಟ ವಾರ್ಡ್ ರಸ್ತೆಗಳ ಪಟ್ಟಿಯನ್ನು ಅರ್ಜಿದಾರರಿಗೆ ಪ್ರದರ್ಶಿಸಲಾಗುತ್ತದೆ, ಅರ್ಜಿದಾರರು ತಮ್ಮ ರಸ್ತೆಯನ್ನು ಪಟ್ಟಿಯಿಂದ ಆಯ್ಕೆ ಮಾಡತಕ್ಕದ್ದು. ಒಂದು ವೇಳೆ ಆಸ್ತಿಯ ಮುಂಭಾಗದಲ್ಲಿರುವ ರಸ್ತೆಯು ಪಟ್ಟಿಯಲ್ಲಿ ಇಲ್ಲದಿದ್ದರೆ, ಅವರು

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತಮ್ಮ ರಸ್ತೆಗೆ ಹತ್ತಿರವಿರುವ ರಸ್ತೆಯನ್ನು ಪಟ್ಟಿಯಿಂದ ಆಯ್ಕೆ ಮಾಡಿ ಸದರಿ ರಸ್ತೆಯ ಹೆಸರನ್ನು ನಮೂದಿಸತಕ್ಕದ್ದು.

(ix) ಒಂದು ವೇಳೆ ಖಾಸಗಿ ರಸ್ತೆಯಾಗಿದ್ದಲ್ಲಿ, ವಾರ್ಡ್ ರಸ್ತೆಗಳ ಪಟ್ಟಿಯನ್ನು ಅರ್ಜಿದಾರರಿಗೆ ಪ್ರದರ್ಶಿಸಲಾಗುತ್ತದೆ, ಮತ್ತು ಅವರು ತಮ್ಮ ಮುಂಭಾಗದ ರಸ್ತೆಗೆ ಹತ್ತಿರವಿರುವ ರಸ್ತೆಯನ್ನು ಪಟ್ಟಿಯಿಂದ ಆಯ್ಕೆ ಮಾಡಿ ಸದರಿ ರಸ್ತೆಯ ಹೆಸರನ್ನು ನಮೂದಿಸತಕ್ಕದ್ದು.

(x) ಅರ್ಜಿದಾರರು ಈ ಕೆಳಗಿನ ದಾಖಲೆಗಳನ್ನು ಅಪ್‌ಲೋಡ್ ಮಾಡತಕ್ಕದ್ದು.

(ಎ) ಯಾವುದೇ ವಾಸ್ತುಶಿಲ್ಪಿ (Architect) / ಅಭಿಯಂತರರು / ಪ್ರಾಧಿಕಾರದಿಂದ ಸಿದ್ಧಪಡಿಸಲಾದ ನಿವೇಶನದ ನಕ್ಷೆ.

(ಬಿ) ಆಸ್ತಿಯಲ್ಲಿ ಕಟ್ಟಡ / ಶೆಡ್ ನಿರ್ಮಿಸಿದ್ದಲ್ಲಿ, ಕಟ್ಟಡ ನಕ್ಷೆಯನ್ನು ಯಾವುದೇ ವಾಸ್ತುಶಿಲ್ಪಿ (Architect) / ಅಭಿಯಂತರರು / ಪ್ರಾಧಿಕಾರದಿಂದ ಸಿದ್ಧಪಡಿಸತಕ್ಕದ್ದು.

(ಸಿ) ಒಂದು ವೇಳೆ ಖಾಸಗಿ ರಸ್ತೆಯಾಗಿದ್ದಲ್ಲಿ, ಯಾವುದೇ ಭೂಮಾಪಕರು / ವಾಸ್ತುಶಿಲ್ಪಿ/ ಪ್ರಾಧಿಕಾರವು ನೀಡಿರುವ ಆಸ್ತಿಯ ಮುಂಭಾಗದಿಂದ ಪ್ರಾರಂಭಿಸಿ ಹತ್ತಿರದ ಸಾರ್ವಜನಿಕ ರಸ್ತೆಯವರೆಗೆ ರಸ್ತೆಯ ರೇಖಾಚಿತ್ರ (Sketch).

(xi) ಎಲ್ಲಾ ಅರ್ಜಿಗಳನ್ನು ಈ ಕೆಳಗಿನಂತೆ ಪ್ರಕ್ರಿಯೆಗೊಳಿಸತಕ್ಕದ್ದು.

(ಎ) ಅರ್ಜಿಯನ್ನು ಸ್ವತ್ತಿನ ಸ್ಥಳ ಪರಿಶೀಲನೆಗಾಗಿ ಸ್ಥಳ ಪರಿಶೀಲನಾ ಸಿಬ್ಬಂದಿಗೆ ಕಳುಹಿಸತಕ್ಕದ್ದು. ಸ್ಥಳ ಪರಿಶೀಲನೆಯಲ್ಲಿ, ಸಿಬ್ಬಂದಿ ಸದರಿ ಸ್ಥಳದಲ್ಲಿ ಸ್ವತ್ತಿನ ಅಸ್ತಿತ್ವವನ್ನು ಪರಿಶೀಲಿಸಬೇಕು ಮತ್ತು ಆಸ್ತಿಯ GPS ಅನ್ನು ಸಹ ಸೆರೆಹಿಡಿಯಬೇಕು. ಮುಂದುವರೆದು, ಸದರಿ ಸ್ವತ್ತು ಖಾಸಗಿ ರಸ್ತೆಯಲ್ಲಿ ಅಥವಾ ಸಾರ್ವಜನಿಕ ರಸ್ತೆಗಳ ಪಟ್ಟಿಯಲ್ಲಿ ಇಲ್ಲದ ರಸ್ತೆಯಲ್ಲಿ ಇದ್ದಲ್ಲಿ, ಸಿಬ್ಬಂದಿ ಹತ್ತಿರದ ಸಾರ್ವಜನಿಕ ರಸ್ತೆಗೆ ಸಂಪರ್ಕ ಹೊಂದುವ ಸಾರ್ವಜನಿಕ ರಸ್ತೆಯ GPS ಅನ್ನು ಸೆರೆಹಿಡಿಯುವುದು. ಈ ಸಂಬಂಧ ಸಿಬ್ಬಂದಿಗೆ ಕಾಲಕಾಲಕ್ಕೆ ಸೂಚಿಸಲಾಗುವ ನಿರ್ದೇಶನದಂತೆ ಹೆಚ್ಚಿನ ಪರಿಶೀಲನೆಯನ್ನು ಮಾಡತಕ್ಕದ್ದು.

(ಬಿ) ಒಂದು ವೇಳೆ ಖಾಸಗಿ ರಸ್ತೆಯಾಗಿದ್ದಲ್ಲಿ, ಆಸ್ತಿಯ ಜಿಪಿಎಸ್ ಮತ್ತು ಸ್ಥಳ ಪರಿಶೀಲನಾ ವರದಿಯನ್ನು ಡಿಜಿಟಲೀಕರಣ ಮತ್ತು ಸರ್ವೆ ವಿಂಗ್‌ಗೆ ಕಳುಹಿಸಿ ಕೊಡಲಾಗುತ್ತದೆ. ಸರ್ವೆ ವಿಂಗ್‌ನಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಪ್ರಕರಣ 212 ರ ಅಡಿಯಲ್ಲಿ ಸಾರ್ವಜನಿಕ ರಸ್ತೆ ಎಂದು ಘೋಷಿಸುವ ಉದ್ದೇಶಕ್ಕಾಗಿ ಖಾಸಗಿ ರಸ್ತೆಯ ನಕ್ಷೆಯನ್ನು ಸಿದ್ಧಪಡಿಸತಕ್ಕದ್ದು.

(ಸಿ) ಖಾಸಗಿ ರಸ್ತೆ ನಕ್ಷೆಯನ್ನು ಸಿದ್ಧಪಡಿಸಿ ಗುಣಮಟ್ಟ ಪರಿಶೀಲನೆಯನ್ನು ನಡೆಸಿದ ನಂತರ, ಅದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಅಥವಾ ಆಯುಕ್ತರು ನಿರ್ಧರಿಸಬಹುದಾದ ಸೂಕ್ತ ಅಧಿಕಾರಿಗಳ

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಲಾಗಿನ್‌ಗೆ ಕಳುಹಿಸತಕ್ಕದ್ದು. ಸ್ವೀಕರಿಸಿದ ಅಧಿಕಾರಿಯು ಗರಿಷ್ಠ 7 ದಿನಗಳ ಅವಧಿಯಲ್ಲಿ ವಿಲೇವಾರಿ ಮಾಡತಕ್ಕದ್ದು. ಯಾವುದೇ ಅರ್ಜಿಯನ್ನು ಸ್ವೀಕರಿಸಲಾದ 7 ದಿನಗಳ ಒಳಗಾಗಿ ವಿಲೇವಾರಿ ಮಾಡದೇ ಇದ್ದಲ್ಲಿ, ಅದನ್ನು ಅನುಮೋದಿಸಲಾಗಿದೆ ಎಂದು ಪರಿಗಣಿಸಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಪ್ರಕರಣ 212 ರ ಪ್ರಕಾರ ಸಾರ್ವಜನಿಕ ರಸ್ತೆ ಎಂದು ಘೋಷಿಸಲು ನಗರ ಪಾಲಿಕೆಯ ಆಯುಕ್ತರಿಗೆ ವರ್ಗಾವಣೆ ಆಗುತ್ತದೆ.

(ಡಿ) ಸ್ಥಳ ಪರಿಶೀಲನಾ ತಂಡದ ವರದಿಯನುಸಾರ ಆಸ್ತಿಯ ಅಂತಿಮ ಜಿಪಿಎಸ್ ಅನ್ನು KSRSAC, ಸಂಸ್ಥೆಯು ಡಿಜಿಟಲೀಕರಣಗೊಳಿಸಿರುವ ಮತ್ತು ಭೌಗೋಳಿಕವಾಗಿ ಉಲ್ಲೇಖಿಸಿರುವ ಬೆಂಗಳೂರು ನಗರದ ಮಾಸ್ಟರ್ ಪ್ಲಾನ್‌ನಲ್ಲಿ ಅಳವಡಿಸಿ ಅನುಮತಿಸಲಾದ ಬಳಕೆಯನ್ನು ನಿರ್ಧರಿಸಲು ಉಪಯೋಗಿಸಲಾಗುವುದು, ಆಸ್ತಿಯ ಬಳಕೆಯು ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿಲ್ಲದಿದ್ದರೆ, ಏಕ ನಿವೇಶನದ ಅರ್ಜಿಯನ್ನು ತಿರಸ್ಕರಿಸುವ ಸಂಬಂಧ ಹಿಂಬರಹವನ್ನು ತಂತ್ರಾಂಶದ ಮೂಲಕ "ಸಿಸ್ಟಮ್ ಡಿಜಿಟಲ್ ಸಹಿ" ಯೊಂದಿಗೆ ನೀಡಲಾಗುವುದು.

(ಇ) ಆಸ್ತಿಯ ಬಳಕೆಯು ಮಾಸ್ಟರ್ ಪ್ಲಾನ್‌ಗೆ ಅನುಗುಣವಾಗಿದ್ದರೆ, ಮುಂದಿನ ಪ್ರಕ್ರಿಯೆ / ಅನುಮೋದನೆಗಾಗಿ ಕೆಳಕಂಡಂತೆ ಕ್ರಮವಹಿಸಲಾಗುವುದು.

(ಎಫ್) ಅರ್ಜಿದಾರರು ಆಸ್ತಿಯು ಕಂದಾಯ ಸರ್ವೆ ಸಂಖ್ಯೆಯಲ್ಲಿದೆ ಎಂದು ಘೋಷಿಸಿದ್ದಲ್ಲಿ ಸದರಿ ಕಂದಾಯ ಸರ್ವೆ ಸಂಖ್ಯೆಯಲ್ಲಿ ಭೂ ಪರಿವರ್ತನೆ ಆದೇಶವನ್ನು ವಿದ್ಯುನ್ಮಾನ ಮಾದರಿಯಲ್ಲಿ (Through electronically) ಲಭ್ಯವಿಲ್ಲದಿದ್ದರೆ ಮತ್ತು ಸ್ವಯಂಚಾಲಿತವಾಗಿ ಪರಿಶೀಲನೆ ಆಗದಿದ್ದರೆ ಮತ್ತು ಆಸ್ತಿಯ ಸ್ಥಳವು ಹೇಳಲಾದ ಕಂದಾಯ ಸರ್ವೆ ಸಂಖ್ಯೆಯಲ್ಲಿದೆ ಎಂದು ದೃಢೀಕರಿಸದಿದ್ದಲ್ಲಿ, ಅಪ್‌ಲೋಡ್ ಮಾಡಲಾದ ಭೂ ಪರಿವರ್ತನೆ ಆದೇಶ ಮತ್ತು ಇತರ ವಿವರಗಳೊಂದಿಗೆ ಅರ್ಜಿಯನ್ನು ಸಹಾಯಕ ಕಂದಾಯ ಅಧಿಕಾರಿ ಅಥವಾ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಅಥವಾ ಸೂಕ್ತ ಅಧಿಕಾರಿಗೆ ಪರಿಶೀಲನೆ ಮತ್ತು ದೃಢೀಕರಣಕ್ಕಾಗಿ ಕಳುಹಿಸಲಾಗುತ್ತದೆ.

(ಜಿ) ಒಂದು ವೇಳೆ ಅರ್ಜಿದಾರರ ಘೋಷಣೆ ಅಥವಾ GPS ಆಧಾರಿತ ಪರಿಶೀಲನೆಯ ಆಧಾರದ ಮೇಲೆ ಆಸ್ತಿಯು ಕಂದಾಯ ಸರ್ವೆ ಸಂಖ್ಯೆಯಲ್ಲಿದೆ ಎಂದು ದೃಢೀಕರಿಸಿದ ಸಂದರ್ಭದಲ್ಲಿ, ಭೂ ಪರಿವರ್ತನೆಯನ್ನು ಈಗಾಗಲೇ ಮಾಡಿ ದೃಢೀಕರಿಸದ ಹೊರತು, ಸಂಬಂಧಿತ ಭೂ ಪರಿವರ್ತನೆ ಶುಲ್ಕಗಳು ಅನ್ವಯವಾಗುತ್ತವೆ ಮತ್ತು ಅರ್ಜಿದಾರರಿಂದ ಪಾವತಿಸಬೇಕಾಗುತ್ತದೆ.

(ಹೆಚ್) ಖಾಸಗಿ ರಸ್ತೆಯಲ್ಲಿರುವ ಸ್ವತ್ತಾಗಿದ್ದಲ್ಲಿ, ಮೇಲೆ ತಿಳಿಸಲಾಗಿರುವಂತೆ ಸಿದ್ಧಪಡಿಸಲಾದ ಖಾಸಗಿ ರಸ್ತೆಯನ್ನು ಹತ್ತಿರದ ಸಾರ್ವಜನಿಕ ರಸ್ತೆಗೆ ಸಂಪರ್ಕಿಸುವ ರೇಖಾಚಿತ್ರದ ಪ್ರಕಾರ, ಸಂಬಂಧಪಟ್ಟ ನಗರ ಪಾಲಿಕೆಯ

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಿ. ಅನ್ವಯವಾಗುವ ಶುಲ್ಕಗಳನ್ನು.

ಹೆಚ್. ಏಕ ನಿವೇಶನ ಅನುಮೋದನೆ ಪ್ರಮಾಣಪತ್ರ ಮತ್ತು ರೇಖಾಚಿತ್ರದ ಆಧಾರದ ಮೇಲೆ ಬಿ-ಖಾತಾ ಸ್ವಯಂಚಾಲಿತವಾಗಿ ಎ-ಖಾತಾ ಆಗಿ ಪರಿವರ್ತನೆಗೊಳ್ಳುತ್ತದೆ.

3. 10000 ಚದರ ಮೀಟರ್‌ಗಿಂತ ಮೇಲ್ಪಟ್ಟು ವಿಸ್ತೀರ್ಣವಿರುವ "ಏಕ ನಿವೇಶನ".

ಸದರಿ ವಿಸ್ತೀರ್ಣಕ್ಕೆ ಸಂಬಂಧಪಟ್ಟ ಯೋಜನಾ ಪ್ರಾಧಿಕಾರವು, ಪ್ರಾಧಿಕಾರದ ಕಾರ್ಯವಿಧಾನಗಳ ಅನ್ವಯ ಅನುಮೋದನೆಯನ್ನು ನೀಡಲಾಗುತ್ತದೆ.

4. ಕೆಟಿಸಿಪಿ ಕಾಯಿದೆ 1961 ರ ಪ್ರಕರಣ 17 ರ ಅಡಿಯಲ್ಲಿ "ಏಕ ನಿವೇಶನವನ್ನು" ಅನುಮೋದಿಸಿದ ನಂತರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಇ-ಆಸ್ತಿ ವ್ಯವಸ್ಥೆಗೆ ವಿದ್ಯುನ್ಮಾನವಾಗಿ ಆಗಿ ವರ್ಗಾಯಿಸಲಾಗುತ್ತದೆ. ಬಿ-ಖಾತೆ ಹೊಂದಿರುವ ಸ್ವತ್ತಾಗಿದ್ದಲ್ಲಿ ("ನಿವೇಶನ" ಅಥವಾ "ಕಟ್ಟಡ ಹೊಂದಿರುವ ನಿವೇಶನ" ಪ್ರಕಾರ) ಅದನ್ನು ತಂತ್ರಾಂಶದ ಡಿಜಿಟಲ್ ಸಹಿಗಳ ಮೂಲಕ ಸ್ವಯಂಚಾಲಿತವಾಗಿ ಎ-ಖಾತೆಯನ್ನಾಗಿ ಪರಿವರ್ತಿಸಲಾಗುತ್ತದೆ ಮತ್ತು ಸದರಿ ನಿವೇಶನದಲ್ಲಿ ನಕ್ಷೆ ಅನುಮೋದನೆಯನ್ನು ಪಡೆಯದೇ ನಿರ್ಮಿಸಲಾಗಿರುವ ಕಟ್ಟಡವಾಗಿದ್ದಲ್ಲಿ ಇ-ಖಾತಾ ದ ಷರಾ ಕಾಲಂನಲ್ಲಿ "ಅನುಮೋದಿತವಲ್ಲದ ಕಟ್ಟಡ" ಎಂದು ದಾಖಲಿಸುವುದು. ಖಾಲಿ ನಿವೇಶನ ಅಥವಾ ಕಟ್ಟಡ ಹೊಂದಿರುವ ನಿವೇಶನದ ಹೊಸ ಖಾತಾದಲ್ಲಿ, "ಏಕ ನಿವೇಶನ" ಅನುಮೋದನೆಯ ನಂತರ, ಹೊಸ ಖಾತಾ ನೀಡಲು ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ ಅನುಮೋದಿತವಲ್ಲದ ಕಟ್ಟಡವಿದ್ದರೆ "ಅನುಮೋದಿತವಲ್ಲದ ಕಟ್ಟಡ" ಎಂಬ ಷರಾದೊಂದಿಗೆ ಇ-ಆಸ್ತಿ ವ್ಯವಸ್ಥೆಯಲ್ಲಿ ಎ-ಖಾತಾವನ್ನು ನೀಡತಕ್ಕದ್ದು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :

1. ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಕಂದಾಯ) ರವರ ಮಾಹಿತಿಗಾಗಿ ಕಳುಹಿಸಿದೆ
3. ಎಲ್ಲಾ ವಲಯ ಆಯುಕ್ತರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಜಂಟಿ ಆಯುಕ್ತರು (ಕಂದಾಯ) ರವರ ಮಾಹಿತಿಗಾಗಿ ಕಳುಹಿಸಿದೆ
5. ಎಲ್ಲಾ ವಲಯ ಜಂಟಿ ಆಯುಕ್ತರುಗಳಿಗೆ / ಉಪ ಆಯುಕ್ತರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಎಲ್ಲಾ ವಲಯಗಳ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಎಲ್ಲಾ ಕಂದಾಯ ಅಧಿಕಾರಿಗಳು / ಸಹಾಯಕ ಕಂದಾಯ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಕಂದಾಯ ಇಲಾಖೆಯ ಎಲ್ಲಾ ಸಿಬ್ಬಂದಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಪ್ರತಿ

ಆಯುಕ್ತರು ಜಿಬಿಜಿ ಕಾಯ್ದೆ 2024 ರ ಪ್ರಕರಣ 212 ರ ಪ್ರಕಾರ ಸದರಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸತಕ್ಕದ್ದು. ಈ ರೀತಿ ಘೋಷಿಸಲಾದ ಖಾಸಗಿ ರಸ್ತೆಯು ವಿವಿಧ ನಗರ ಪಾಲಿಕೆಯಲ್ಲಿದ್ದಲ್ಲಿ ಆಸ್ತಿಯು ಯಾವ ನಗರ ಪಾಲಿಕೆ ವ್ಯಾಪ್ತಿಯಲ್ಲಿದೆಯೋ ಆ ಪಾಲಿಕೆಯ ಆಯುಕ್ತರು ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸತಕ್ಕದ್ದು.

(ಐ) GBG ಕಾಯ್ದೆ 2024 ರ ಪ್ರಕರಣ 212 ರ ಅಡಿಯಲ್ಲಿ ಆಯುಕ್ತರು ಖಾಸಗಿ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸಿದ ನಂತರ (ಆಸ್ತಿಯ ಮುಂಭಾಗದ ರಸ್ತೆ ಈಗಾಗಲೇ ಸಾರ್ವಜನಿಕ ರಸ್ತೆಯಾಗಿಲ್ಲದಿದ್ದರೆ) ಮೇಲೆ ಉಲ್ಲೇಖಿಸಲಾದ ಅಗತ್ಯತೆಯನ್ನು ಯಶಸ್ವಿಯಾಗಿ ಪೂರೈಸಿದ ನಂತರ, ಅರ್ಜಿದಾರರು ಈ ಕೆಳಗಿನ ಪಾವತಿಗಳನ್ನು ಆನ್‌ಲೈನ್ ಮೂಲಕ ಮಾಡಬೇಕಾಗಿರುತ್ತದೆ.

(1) ಒಂದು ವೇಳೆ ಪ್ರಸ್ತಾಪಿತ ಆಸ್ತಿಯು ಕಂದಾಯ ಸರ್ವೆ ಸಂಖ್ಯೆಯ ಆಸ್ತಿಯಾಗಿದ್ದು, ಭೂ ಪರಿವರ್ತನೆಗೊಳ್ಳದಿದ್ದರೆ, ಅನ್ವಯವಾಗುವ ಭೂ ಪರಿವರ್ತನೆಯ ದಂಡ.

(2) ದಿನಾಂಕ: 16.7.2025ರ ಅಧಿಸೂಚನೆ ಮತ್ತು ಮೇಲೆ ತಿಳಿಸಲಾಗಿರುವ ಅಧಿಸೂಚನೆಯ ಪ್ರಕಾರ ಅನ್ವಯವಾಗುವ ಶುಲ್ಕಗಳು.

(3) "ಏಕ ನಿವೇಶನ" ಅನುಮೋದನೆಗೆ ಅನ್ವಯವಾಗುವ ಇತರ ಶಾಸನಬದ್ಧ ಶುಲ್ಕಗಳು.

(ಜೆ) ತದನಂತರ "ಏಕ ನಿವೇಶನ" ಕ್ಕೆ ಸಿಸ್ಟಮ್ ಡಿಜಿಟಲ್ ಸಹಿ ಪ್ರಮಾಣಪತ್ರವನ್ನು ಬಳಸಿಕೊಂಡು ತಂತ್ರಾಂಶದ ಮೂಲಕ ಸ್ವಯಂಚಾಲಿತವಾಗಿ ಅನುಮೋದನೆಯನ್ನು ನೀಡಲಾಗುತ್ತದೆ.

2. 2000 ಚದರ ಮೀಟರ್‌ಗಿಂತ ಮೇಲ್ಪಟ್ಟ ವಿಸ್ತೀರ್ಣ ಮತ್ತು 10000 ಚದರ ಮೀಟರ್‌ಗಳವರೆಗಿನ " ಏಕ ನಿವೇಶನ":

2000 ಚದರ ಮೀಟರ್‌ಗಿಂತ ಮೇಲ್ಪಟ್ಟು ವಿಸ್ತೀರ್ಣವಿರುವ "ಏಕ ನಿವೇಶನ" ಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರತ್ಯೇಕ ವೆಬ್‌ಸೈಟ್‌ನಲ್ಲಿ https://bpas.bbmpgov.in ಅವಕಾಶ ಕಲ್ಪಿಸಲಾಗಿದ್ದು, ಸಂಕ್ಷಿಪ್ತ ವಿವರಗಳು ಕೆಳಕಂಡಂತಿರುತ್ತದೆ.

ಎ. ವೆಬ್‌ಸೈಟ್ https://BPAS.bbmpgov.in ನಲ್ಲಿ ನೋಂದಾಯಿತ ವಾಸ್ತುಶಿಲ್ಪಿ ಅಥವಾ ಅಭಿಯಂತರರ ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
ಬಿ. ನಿವೇಶನದ ಅಗತ್ಯ ದಾಖಲೆಗಳು ಮತ್ತು CAD ರೇಖಾಚಿತ್ರಗಳನ್ನು ಅಪ್‌ಲೋಡ್ ಮಾಡುವುದು.
ಸಿ. ಆರಂಭಿಕ ಪರಿಶೀಲನಾ ಶುಲ್ಕವಾಗಿ ರೂ 500 ಗಳನ್ನು ಪಾವತಿಸುವುದು.
ಡಿ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ. (ಸಮುಚ್ಛಯಗಳ ಘಟಕಗಳಿಗೆ ಅನ್ವಯಿಸುವುದಿಲ್ಲ).
ಇ. ನಗರ ಪಾಲಿಕೆಯಿಂದ ಸ್ಥಳ ಪರಿಶೀಲನೆ.
ಎಫ್. ಅರ್ಹತೆಯ ಪ್ರಕಾರ ಅನುಮೋದನೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ.ಸಂ	ವಿವರಗಳು	ನಿಗಧಿಪಡಿಸಲಾಗಿರುವ ಶುಲ್ಕ
1	5 ಗುಂಟೆಗಳವರೆಗೆ (5445 ಚ.ಅಡಿ ಅಥವಾ 505.85 ಚ.ಮೀ)	ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ.
2	5 ಗುಂಟೆಗಳಿಗೂ ಮೇಲ್ಪಟ್ಟು (5445 ಚ.ಅಡಿ ಅಥವಾ 505.85 ಚ.ಮೀ) 7.50 ಗುಂಟೆಗಳವರೆಗೆ (8167.5 ಚ.ಅಡಿ ಅಥವಾ 756.78 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.70% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
3	7.50 ಗುಂಟೆಗಳಿಗೂ ಮೇಲ್ಪಟ್ಟು (8167.5 ಚ.ಅಡಿ ಅಥವಾ 758.78 ಚ.ಮೀ) 10 ಗುಂಟೆಗಳವರೆಗೆ (10890 ಚ.ಅಡಿ ಅಥವಾ 1011.7 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.65% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
4	10 ಗುಂಟೆಗಳಿಗೂ ಮೇಲ್ಪಟ್ಟು (10890 ಚ.ಅಡಿ ಅಥವಾ 1011.7 ಚ.ಮೀಟರ್) 20 ಗುಂಟೆಗಳವರೆಗೆ (21780 ಚ.ಅಡಿ ಅಥವಾ 2023.4 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.60% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
5	20 ಗುಂಟೆಗಳಿಗೂ ಮೇಲ್ಪಟ್ಟು (21780 ಚ.ಅಡಿ ಅಥವಾ 2023.4 ಚ.ಮೀಟರ್) 40 ಗುಂಟೆಗಳವರೆಗೆ (43560 ಚ.ಅಡಿಗಳು ಅಥವಾ 4046.86 ಚ.ಮೀಟರ್‌ಗಳು)	ಅಭಿವೃದ್ಧಿ ಹೊಂದಿದ ನಿವೇಶನ ದರದ ಶೇ.55% ರಷ್ಟು ನಿವೇಶನವನ್ನು ಬಳಸಲಾದ ಅಥವಾ ಬಳಸಲು ಪ್ರಸ್ತಾಪಿಸಲಾದ ಎಂಬುದರ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ನಿವೇಶನದ ದರ
6	1 ಎಕರೆಗೂ ಮೇಲ್ಪಟ್ಟು (43560 ಚ.ಅಡಿಗಳು ಅಥವಾ 4046.86 ಚ.ಮೀಟರ್‌ಗಳು)	i) ಕೈಗಾರಿಕಾ + ಕೃಷಿ ಭೂಮಿಯ ದರ + ಶೇ.55 ರಷ್ಟು ಕೃಷಿ ಭೂಮಿಯ ದರ ii) ವಾಸದ ಉಪಯೋಗ = ಕೃಷಿ ಭೂಮಿಯ ದರ + ಶೇ.65% ಕೃಷಿ ಭೂಮಿಯ ದರ iii) ವಾಣಿಜ್ಯ = ಕೃಷಿ ಭೂಮಿಯ ದರ ಶೇ.80 ರಷ್ಟು ಕೃಷಿ ಭೂಮಿಯ ದರ